ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 1, ಸಂಚಿಕೆ 5
ಮಾರ್ಚ್ 2023

SHRIDEVI ANTARANGA
Monthly Magazine

SHRIDEVI EDUCATION






ಪ್ರಧಾನ ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ರಾಜಕೀಯ ಮತ್ತು ಸಾಮಾಜಿಕ ಸಮಾನತೆ ದೊರೆಯದಿದ್ದರೆ ಪ್ರಜಾಪ್ರಭುತ್ವಕ್ಕೆ ಅರ್ಥವೇನು?

**ಭಾರತೀಯ ಸಮಾಜದಲ್ಲಿ 3000 ಜಾತಿಗಳಿವೆ. ಶೋಷಣೆ ಎಂಬುದು ಮೇಲ್ಜಾತಿಯಿಂದ ಮಾತ್ರ ನಡೆಯುವುದಿಲ್ಲ. ಭಾರತದ ಶ್ರೇಣೀಕೃತ ಸಮಾಜದಲ್ಲಿ ತಮಗಿಂತ ಕೆಳಗಿನವರನ್ನು ಎಲ್ಲಾ ಸಮುದಾಯದವರು ಒಂದಲ್ಲ ಒಂದು ರೀತಿ ಶೋಷಣೆ ಮಾಡುತ್ತಿರುತ್ತಾರೆ. ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ಸಮುದಾಯಗಳಿಗೆ ಸ್ವಲ್ಪ ಜಾಗೃತಿ ಪಡೆದುಕೊಂಡವರೇ ಎಲ್ಲಾ ಸೌಲಭ್ಯಗಳನ್ನು ಮತ್ತೆಮತ್ತೇ ಪಡೆದುಕೊಳ್ಳುತ್ತಾರೆ. ಅವರು ತಮ್ಮ ಜೊತೆಗಿರುವವರ ವಿಚಾರದಲ್ಲಿ ಯೋಚಿಸುವುದಿಲ್ಲ. ತಮಗೆ ದೊರೆತ ಸವಲತ್ತುಗಳನ್ನು ಹಂಚಿಕೊಳ್ಳಲು ಮುಂದಾಗುವುದಿಲ್ಲ. ಅದಕ್ಕಾಗಿ ಒಳಮೀಸಲಾತಿ ಅನುಷ್ಠಾನವಾಗಬೇಕು ಎಂಬ ಕೂಗಿದೆ.**

"ವೈವಿಧ್ಯತೆಯ ವ್ಯವಸ್ಥೆಯಿರುವ, ಭಿನ್ನಧ್ವನಿಗೆ ಅವಕಾಶವಿರುವ, ಸಮಾನತೆಯಿಲ್ಲದವರಿಗೆ ಸಮಾನತೆ ಕೊಡುವ ಆಕರ್ಷಕ ಪದ್ಧತಿಯೇ ಪ್ರಜಾಪ್ರಭುತ್ವ ಸರ್ಕಾರ" ಎಂದು ಗ್ರೀಕ್‌ನ ಖ್ಯಾತ ಚಿಂತಕ ಮತ್ತು ತತ್ವಜ್ಞಾನಿ ಪ್ಲೇಟೋ ತನ್ನ 'ದಿ ರಿಪಬ್ಲಿಕ್' (The Republic) ಗ್ರಂಥದಲ್ಲಿ ಹೇಳಿದ್ದಾನೆ. ಇದೇ ಮಾತುಗಳನ್ನು ಭಾರತದ ಸಂವಿಧಾನದ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಸಹ ಹೇಳುತ್ತಾರೆ. ಅವರ ಮಾತುಗಳೆಂದರೆ "ಪ್ರಜಾಪ್ರಭುತ್ವ ಒಂದು ಬಗೆಯ ಆಡಳಿತ ವಿಧಾನ ಮಾತ್ರವಲ್ಲ, ಮೂಲತಃ ಅದೊಂದು ಬಗೆಯ ಸಾಮಾಜಿಕ ಜೀವನ ಪದ್ಧತಿ. ಸಂಯುಕ್ತ ಸಂಪರ್ಕವುಳ್ಳ ಅನುಭವಶಾಲಿ ದೇಶಭಕ್ತರು ಪರಸ್ಪರ ಗೌರವದಿಂದ ಕಾಣುವ ಮನೋವೃತ್ತಿ ಪ್ರಜಾಪ್ರಭುತ್ವದ ಮೂಲ ಲಕ್ಷಣವಾಗಿದೆ".

2023ರ ನೂತನ ವರ್ಷ ಕರ್ನಾಟಕ ವಿಧಾನಸಭೆಗೆ ನಡೆಯುವ ಚುನಾವಣೆಯಿಂದ ಆರಂಭವಾಗಿದೆ. ರಾಜ್ಯದ ಎಲ್ಲೆಡೆ ಚುನಾವಣೆಯ ಮಾತುಕತೆ ಜೋರಾಗಿ ನಡೆಯುತ್ತಿದೆ. ರಾಜಕೀಯ ಪಕ್ಷಗಳು ಮತ್ತು ಅದರ ನಾಯಕರು ಚುನಾವಣೆಯ ಹಿನ್ನೆಲೆಯಲ್ಲಿ ತಮ್ಮ ಮಾತುಕತೆ ಪ್ರಾರಂಭ ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಯಾವುದೇ ಪೂರ್ವಗ್ರಹದ ಆಲೋಚನೆಗೆ ಸಿಲುಕದೆ ವಾಸ್ತವಸ್ಥಿತಿಯನ್ನು ಚಿಂತಿಸಿ ಮುಂದೆ ಅನುಸರಿಸಬೇಕಾದ ಮಾರ್ಗಗಳ ಬಗ್ಗೆ ಚಿಂತಿಸುವುದು ಅಗತ್ಯವೆಂದು ನಾನಾದರೋ ಭಾವಿಸಿದ್ದೇನೆ. ಇದೊಂದು ವ್ಯಕ್ತಿಗತವಾದ ಅನಿಸಿಕೆ. ಆದರೂ ರಾಜ್ಯದ ಒಟ್ಟಾರೆ ಸಾಮಾಜಿಕ ವ್ಯವಸ್ಥೆಯನ್ನು ಪರ್ಯಾಲೋಚನೆ ಮಾಡಲಾಗಿದೆ.

ಭಾರತದ 75 ವರ್ಷಗಳ ಪ್ರಜಾಪ್ರಭುತ್ವ ವ್ಯವಸ್ಥೆಯ ಆಡಳಿತದಲ್ಲಿ ಎಲ್ಲಾ ವರ್ಗದವರಿಗೂ ಸಮಾನವಾದ ಅವಕಾಶ ದೊರಕಿದೆಯೇ? 250 ವರ್ಷಗಳ ಬ್ರಿಟಿಷ್‌ರ ಗುಲಾಮಗಿರಿಯನ್ನು ಕಿತ್ತೊಗೆದು ನಮ್ಮದೇ ಸಂವಿಧಾನ ರಚಿಸಿಕೊಂಡು, ಅದರ ಅನ್ವಯ ಪ್ರಜಾಪ್ರಭುತ್ವದ ತತ್ವಗಳನ್ನಾಧರಿಸಿ ಆಳ್ವಿಕೆ ನಡೆಸುತ್ತಿರುವ ನಾವು ಎಲ್ಲರಿಗೂ ಸಮಾನ ಅವಕಾಶ ಕೊಟ್ಟಿದ್ದೇವೆಯೇ? ಯಾವುದೇ ಸೌಲಭ್ಯವನ್ನು ಪಡೆಯದ ಜನರು ಎಚ್ಚರಗೊಂಡಿದ್ದಾರೆಯೇ? ಯಾರು ಜಾಗೃತವಾಗಿದ್ದಾರೋ ಅಥವಾ ಯಾರ ಗಂಟಲಧ್ವನಿ ಹೆಚ್ಚಿರುತ್ತದೋ ಅಂತಹವರಿಗೆ ಸವಲತ್ತು ಮತ್ತು ಪ್ರಾತಿನಿಧ್ಯ ಸಿಕ್ಕಿದೆಯೇ? ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ ಸಮಾನತೆ ತತ್ವದಡಿ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಕೆಲಸ ಮಾಡುತ್ತಿದೆಯೇ? ಸ್ವಾತಂತ್ರ್ಯಾನಂತರ ಅನೇಕ ಸವಲತ್ತುಗಳನ್ನು ಪಡೆದ ಕೆಲವು ಸಮುದಾಯಗಳು ತಮ್ಮ ಸೋದರ ಸಮಾಜದೊಂದಿಗೆ ಅಂತಹ ಸೌಲಭ್ಯವನ್ನು ಹಂಚಿಕೊಳ್ಳುವ ಮನುಷ್ಯ ಸಹಜವಾದ ಉದಾರತೆಯನ್ನು ತೋರಿಸಿವೆಯೇ? ಮೊದಲಾದ ಹತ್ತು ಹಲವು ಪ್ರಶ್ನೆಗಳು ಸೂಕ್ಷ್ಮ ಮನಸ್ಸಿನ ವ್ಯಕ್ತಿಯನ್ನು ಸದಾ ಕಾಡುತ್ತಿರುತ್ತವೆ.


ನಾನು ಅರವತ್ತರ ದಶಕದಲ್ಲಿ ಗದುಗಿನಲ್ಲಿ ಪದವಿ ಪೂರ್ವ ಶಿಕ್ಷಣವನ್ನು ಪಡೆಯುತ್ತಿದ್ದೆ. ನಾವು ಹಾಸ್ಟಲ್‌ನಲ್ಲಿದ್ದಾಗ ಮಿತ್ರರೆಲ್ಲರೂ ಸಹಜವಾಗಿ ಒಂದು ಪ್ರಶ್ನೆ ಕೇಳುತ್ತಿದ್ದರು. 'ಅಧಿಕಾರ ಮತ್ತು ಸವಲತ್ತು ಸಮಾನವಾಗಿ ಹಂಚಿಕೆಯಾಗದಿದ್ದರೆ ಭಾರತೀಯ ಸಮಾಜದಲ್ಲಿ ಸುಧಾರಣೆಯೆಂಬುದು ಅರ್ಥವಿಲ್ಲದ ಮಾತಲ್ಲವೇ?' ಇಂದಿಗೂ ಅದೇ ಪ್ರಶ್ನೆ ಅನೇಕರನ್ನು ಕಾಡುತ್ತಿದ್ದರೆ ಆಶ್ಚರ್ಯವಿಲ್ಲ.


ಇಂದಿಗೂ ತಮ್ಮ ಸಮುದಾಯದಲ್ಲಿ ಒಂದೇ ಒಂದು ಐಎಎಸ್, ಐಪಿಎಸ್, ಕೆಎಎಸ್ ಹುದ್ದೆ




ಪಡೆಯದ ಹಾಗೂ ನ್ಯಾಯಾಧೀಶರಿಲ್ಲದ ಅನೇಕ ಸಮುದಾಯಗಳು ಭಾರತೀಯ ಸಮಾಜದಲ್ಲಿವೆ ಎಂದರೆ ಯಾರು ಆಶ್ಚರ್ಯಪಡಬೇಕಾಗಿಲ್ಲ. ಕೆಲವು ಸಮುದಾಯಗಳ ಹೆಸರನ್ನೇ ನಮ್ಮ ಜನ ಕೇಳಿಲ್ಲ. ಅಂದಮೇಲೆ ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ತಿಳಿಯುವುದಾದರೂ ಹೇಗೆ? ಭೈರಾಗಿ, ಹೆಳವ, ಗಂಗಾಪುತ್ರ, ಗಂಗಾಕುಲ, ದಲಾಜಿ, ಗೋಸಾಯಿ, ಬಾವಾಜಿ, ಕೋಲಿ, ಪರವ, ಪಂಬದ, ಮೇದಾರ, ಜಲಗಾರ, ಬುಂಡೆ, ಬೆಸ್ತರು, ಮನ್ನೆಗಾರ, ಮೊಗೇರು, ತಕಾವಿ, ಕಿಚ್ಚುಗಾರ, ಹಾಲಕ್ಕಿ ಒಕ್ಕಲಿಗ, ದಾಸಯ್ಯ, ಗೊರವರು, ಡೊಂಬರು, ಹಕ್ಕಿಪಿಕ್ಕಿಗಳು, ಬಸವನ್ನಾಡಿಸುವವರು. ಕೊರಗ, ದೇವದಾಸಿ. ಬಸವಿ, ಕುರ್ಮಿ, ಯಲಿಗಾರ ಮುಂತಾದ ಮೈಕ್ರೋಸ್ಕೋಪಿಕ್ ಕಮ್ಯುನಿಟಿಗಳನ್ನು (Micro Scopic Community) ಕರ್ನಾಟಕ ರಾಜ್ಯವೊಂದರಲ್ಲೇ ಕಾಣಬಹುದು. ಅದನ್ನು ಭಾರತದ ಮಟ್ಟದಲ್ಲಿ ನೋಡಿದರೆ ಅವುಗಳ ಸಂಖ್ಯೆ ಮತ್ತಷ್ಟು ಹೆಚ್ಚಿರುತ್ತದೆ. ಕರ್ನಾಟಕವೊಂದರಲ್ಲೇ ಮುನ್ನೂರಕ್ಕೂ ಹೆಚ್ಚಿನ ವಿವಿಧ ಸಮುದಾಯಗಳಿವೆ. ಸ್ವಾತಂತ್ರ್ಯ ಬಂದು 75 ವರ್ಷಗಳಾದರೂ ಇವುಗಳಿಗೆ ಯಾವುದೇ ಆರ್ಥಿಕ ಮತ್ತು ಸಾಮಾಜಿಕ ಸೌಲಭ್ಯ ದೊರಕಿಲ್ಲವೆಂದರೆ ಆಶ್ಚರ್ಯಪಡಬೇಕಾಗಿಲ್ಲ. ಇನ್ನು ರಾಜಕೀಯ ಸ್ಥಾನಮಾನವಂತೂ ಕನಸಿನ ಮಾತು. ಇವುಗಳಲ್ಲಿ ಹೆಚ್ಚಿನ ಸಮುದಾಯದವರು ಅಲೆಮಾರಿಗಳು.

▸▸ 6ನೇ ಪುಟಕ್ಕೆ...









## ಸಹೃದಯಿ, ಉದ್ಯಮಿ ಎನ್.ಆರ್. ಜಗದೀಶ ಇನ್ನಿಲ್ಲ

ತುಮಕೂರಿನ ಸಾರ್ವಜನಿಕ, ಶೈಕ್ಷಣಿಕ ಮತ್ತು ಧಾರ್ಮಿಕ ಕ್ಷೇತ್ರಗಳ ಮುಂಚೂಣಿ ನಾಯಕರೆನಿಸಿದ್ದ ಎನ್.ಆರ್. ಜಗದೀಶ್ ಅವರು ಯುಗಾದಿ (ಮಾರ್ಚ್20) ವಯೋಸಹಜ ಕಾಯಿಲೆಯಿಂದ ನಿಧನರಾದರು. ಅವರಿಗೆ 89 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಒಬ್ಬ ಪುತ್ರಿ ಮತ್ತು ಮಡದಿಯನ್ನು ಅವರು ಅಗಲಿ ಹೋಗಿದ್ದಾರೆ. ಎನ್ ಆರ್, ಜಗದೀಶ್ ಅವರು ಸ್ನೇಹಜೀವಿ. ಮಿತ್ರರಿಗೆ ಸಹಾಯ ಮಾಡುವ ಗುಣ ಅವರಲ್ಲಿತ್ತು. ಕಳೆದ ವಾರ ಅವರ ಕಚೇರಿಗೆ ಹೋಗಿದ್ದೆ. ಎಂತಹ ಸ್ನೇಹಸ್ವಭಾವ. ಮಿತ್ರರ ಗುಣ ಮತ್ತು ಸಾಧನೆಯನ್ನು ಮೆಚ್ಚುವ ಸಹೃದಯತೆ ಅವರಲ್ಲಿತ್ತು. ಅವರಿಂದ ಶ್ರೀದೇವಿ ಶಿಕ್ಷಣ ಸಂಸ್ಥೆಗೂ ಸಕಾಲದಲ್ಲಿ ಸಹಾಯವಾಗಿದೆ. ಅದನ್ನು ನಾನು ನನ್ನ ಆತ್ಮಕಥನದಲ್ಲೂ ಜ್ಞಾಪಿಸಿಕೊಂಡಿದ್ದೇನೆ. ಶ್ರೀಯುತರು ತುಮಕೂರು 'ಗ್ರೇನ್ ಮರ್ಚೆಂಟ್ಸ್ ಕೋ ಅಪರೇಟಿವ್ ಬ್ಯಾಂಕ್'ನ (TGMC) ಅಧ್ಯಕ್ಷರಾಗಿ ಶ್ರೀದೇವಿ ಶಿಕ್ಷಣ ಸಂಸ್ಥೆಗೆ ಸಾಲವನ್ನು ಮಂಜೂರು ಮಾಡಿದರು. ಟಿಜಿಎಂಸಿ ಬ್ಯಾಂಕ್‌ನ ಇತಿಹಾಸವನ್ನು ಶ್ರೀ ಜಗದೀಶ್ ಅವರ ಸಾಧನೆಯ ಜೊತೆಜೊತೆಗೆ ನೋಡಬೇಕಾಗಿದೆ. ಈ ಸಂದರ್ಭದಲ್ಲಿ ಆ ಬ್ಯಾಂಕ್‌ನ ಬೆಳವಣಿಗೆಯನ್ನು ಅವಲೋಕನ ಮಾಡಿದರೆ ಶ್ರೀ ಜಗದೀಶ್ ಅವರ ಸಾಧನೆಯ ಪರಿಚಯವಾಗುತ್ತದೆ.

1963ರಲ್ಲಿ ಈ ಬ್ಯಾಂಕ್ ಪ್ರಾರಂಭವಾಗಿದೆ. ದಕ್ಷಿಣ ಕರ್ನಾಟಕದ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಹಾಸನ, ಮೈಸೂರು, ಚಾಮರಾಜನಗರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಈ ಬ್ಯಾಂಕ್ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಈ ಬ್ಯಾಂಕ್ ಒಟ್ಟು 29 ಶಾಖೆಗಳನ್ನು ಹೊಂದಿದೆ. ವಾರ್ಷಿಕವಾಗಿ 3698 ಕೋಟಿ. ರೂಗಳ ವ್ಯವಹಾರವನ್ನು ಇದು ನಿರ್ವಹಿಸುತ್ತಿದೆ. ಈ ಬ್ಯಾಂಕ್ ಸ್ಥಾಪಕ ನಿರ್ದೇಶಕರಲ್ಲಿ ಒಬ್ಬರಾಗಿರುವ ಎನ್.ಆರ್. ಜಗದೀಶ್ ಸಹಕಾರ ಕ್ಷೇತ್ರ ಮತ್ತು ಉದ್ಯಮದಲ್ಲಿ ಬಹು ದೊಡ್ಡ ಹೆಸರು ಮಾಡಿದವರು. ಪೂಜ್ಯ ಡಾ. ಶಿವಕುಮಾರಸ್ವಾಮಿಗಳ ಆಪ್ತವರ್ಗದಲ್ಲಿದ್ದವರು. ತುಮಕೂರಿನ ಶೈಕ್ಷಣಿಕ ಕ್ಷೇತ್ರದಲ್ಲಿ ಅನೇಕ ಸಾಧನೆಗಳನ್ನು ಮಾಡಿದ್ದಾರೆ.

▸▸ 6ನೇ ಪುಟಕ್ಕೆ...

ಚೈತ್ರಮಾಸದ ಶುಕ್ಲಪಕ್ಷದ ಪಾಡ್ಯದ ದಿನದಂದು ಅಂದರೆ ಈ ವರ್ಷ ಮಾರ್ಚ್ 22ರಂದು (ಶ್ರೀ ಶೋಭಕೃತ್ ಸಂವತ್ಸರ) ಈ ಯುಗಾದಿ ಹಬ್ಬವನ್ನು ಆಚರಿಸಲಾಗುತ್ತದೆ. ಮಾರ್ಚ್ 22ರಿಂದ ಪ್ರಾರಂಭವಾಗುವ ಶುಭದಿನಗಳು ಜೂನ್ 19 ಅಂದರೆ ಆಷಾಡದ ತನಕ ಮುಂದುವರಿದು ಆ ದಿನಗಳಲ್ಲಿ ಮದುವೆ, ಮುಂಜಿ ಮತ್ತು ಜಾತ್ರ ಮಹೋತ್ಸವಗಳು ಸಂಭ್ರಮದಿಂದ ಜರುಗುತ್ತವೆ. ಪ್ರತಿ ಕುಟುಂಬದಲ್ಲೂ ಪ್ರತಿ ಗ್ರಾಮದಲ್ಲೂ ಒಂದಲ್ಲ ಒಂದು ಶುಭ ಕಾರ್ಯವಿರುತ್ತದೆ.

ಸಾಂದರ್ಭಿಕ ಲೇಖನ



ಎನ್. ಭಾರತಿ
ಲೇಖಕಿ

# ಬದುಕಿಗೊಂದು ಅರ್ಥ ಕೊಡುವ 'ಯುಗಾದಿ'

"ನಮ್ಮ ಯೋಗಕ್ಷೇಮವನ್ನು ಈಶ್ವರನಿಗೆ ಅರ್ಪಿಸಿ, ಆತ್ಮವಂತರಾಗಿ ಬದುಕಬೇಕೆಂಬುದನ್ನು ನೆನಪು ಮಾಡಿಕೊಳ್ಳುವ ದಿನವೇ ಹಿಂದೂಗಳ ಹಬ್ಬ ಯುಗಾದಿ" ಎಂದು ಕನ್ನಡದ ಹಿರಿಯ ಲೇಖಕರಾಗಿದ್ದ ಡಾ.ಜಿ.ಪಿ.ರಾಜರತ್ನಂ ಅವರು ತಮ್ಮ 'ವಿಚಾರ ತರಂಗ' ಗ್ರಂಥದಲ್ಲಿ ಬರೆಯುತ್ತಾರೆ.

ಭಾರತೀಯರು ಆಚರಿಸುವ ಪ್ರತಿ ಹಬ್ಬದಲ್ಲೂ ಲೌಕಿಕ ಮತ್ತು ಆಧ್ಯಾತ್ಮಿಕ ಚಿಂತನೆಗಳಿರುವುದನ್ನು ಕಾಣಬಹುದು. 'ಯುಗ+ಆದಿ = ಯುಗಾದಿ ಎಂದು ಶಬ್ದಾರ್ಥವನ್ನು ಮಾಡಬಹುದು. ಯುಗಾದಿ ಎಂದರೆ ಹೊಸ ವರ್ಷದ ಆರಂಭದ ದಿನ. ಹೋಳಿ ಹಬ್ಬದ ನಂತರ ಬರುವ ಯುಗಾದಿಗೆ ಅನೇಕ ವೈಶಿಷ್ಟ್ಯಗಳಿವೆ. ಈ ಹಬ್ಬವನ್ನು ಕರ್ನಾಟಕದಲ್ಲಿ ಮಾತ್ರವಲ್ಲ, ತೆಲಂಗಾಣ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲೂ ಆಚರಿಸುತ್ತಾರೆ. ಬೇರೆ ಅರ್ಥಗಳಲ್ಲಿ ಭಾರತದ ಎಲ್ಲಾ ರಾಜ್ಯಗಳಲ್ಲೂ 'ಹೊಸ ವರ್ಷ'ವನ್ನು ಸ್ವಾಗತಿಸುವ ಹಬ್ಬವನ್ನು ಆಚರಿಸುವುದನ್ನು ನೋಡಬಹುದು. ಮಹಾರಾಷ್ಟ್ರದಲ್ಲಿ 'ಗುಡಿಪಾಡ್' ಎಂದು ಕರೆಯುವ ಈ ಹಬ್ಬದ ಸಂದರ್ಭದಲ್ಲಿ ಬಾವುಟವನ್ನು ಹಾರಿಸಲಾಗುತ್ತದೆ.

ಚೈತ್ರಮಾಸದ ಶುಕ್ಲಪಕ್ಷದ ಪಾಡ್ಯದ ದಿನದಂದು ಅಂದರೆ ಈ ವರ್ಷ ಮಾರ್ಚ್ 22ರಂದು (ಶ್ರೀ ಶೋಭಕೃತ್ ಸಂವತ್ಸರ) ಈ ಯುಗಾದಿ ಹಬ್ಬವನ್ನು ಆಚರಿಸಲಾಗುತ್ತದೆ. ಮಾರ್ಚ್ 22ರಿಂದ ಪ್ರಾರಂಭವಾಗುವ ಶುಭದಿನಗಳು ಜೂನ್ 19 ಅಂದರೆ ಆಷಾಡದ ತನಕ ಮುಂದುವರಿದು ಆ ದಿನಗಳಲ್ಲಿ ಮದುವೆ, ಮುಂಜಿ ಮತ್ತು ಜಾತ್ರ ಮಹೋತ್ಸವಗಳು ಸಂಭ್ರಮದಿಂದ ಜರುಗುತ್ತವೆ. ಪ್ರತಿ ಕುಟುಂಬದಲ್ಲೂ ಪ್ರತಿ ಗ್ರಾಮದಲ್ಲೂ ಒಂದಲ್ಲ ಒಂದು ಶುಭ ಕಾರ್ಯವಿರುತ್ತದೆ.

ಯುಗಾದಿಯ ನಂತರ 'ವರ್ಷದ ಅಡಕು' ಎನ್ನುವ ಆಚರಣೆಯಿದೆ. ಮುಂದಿನ ವರ್ಷ ನಡೆಯುವ ವಿದ್ಯಮಾನಗಳು ಆ ದಿನವೇ ನಡೆಯುತ್ತವೆ ಎಂದು ಜನರು ನಂಬುತ್ತಾರೆ. ಯುಗಾದಿ ಅನೇಕ ಕ್ರೀಡೆಗಳಿಗೆ ಪ್ರೇರಣೆ ನೀಡುತ್ತದೆ. ಕುಸ್ತಿ ಪಂದ್ಯಾವಳಿಗಳಿಗೂ ಅವಕಾಶವಿರುತ್ತದೆ. ಹಿಂದೆ ಹಳ್ಳಿಯಲ್ಲಿ ನಾಟಕಗಳನ್ನು ಆಡುತ್ತಿದ್ದರು. ಹೆಚ್ಚು ಕಡಿಮೆ ಈ ನಾಟಕಗಳು ಪೌರಾಣಿಕ ವಸ್ತುವಿಗೆ ಸಂಬಂಧಪಟ್ಟಿದ್ದವು. ಯುಗಾದಿಯ ಸಂದರ್ಭದಲ್ಲಿ ಕವಿಗೋಷ್ಠಿಯನ್ನು ಏರ್ಪಡಿಸುತ್ತಾರೆ. ವಸಂತ ಋತು ಕವಿಗಳಿಗೆ ಪ್ರಿಯವಾದ ಕಾಲ. ಯುಗಾದಿ ಎಂದರೆ ಮಾವಿನ ಎಲೆ ಮತ್ತು ಮಲ್ಲಿಗೆ ಹೂವಿಗೆ ಮಹತ್ವವಿರುವ ಸಮಯ. ವಸಂತ



ಋತುವಿನ ಆಗಮನವನ್ನು ಯುಗಾದಿ ಸೂಚಿಸುತ್ತದೆ. ವಸಂತ ನವರಾತ್ರಿ ಯುಗಾದಿಯಂದು ಪ್ರಾರಂಭವಾಗಿ ಶ್ರೀರಾಮ ನವಮಿಯ ದಿನ ಮುಕ್ತಾಯಗೊಳ್ಳುತ್ತದೆ. ಯುಗಾದಿಯ ದಿನದಂದು ಚಂದ್ರದರ್ಶನ ಮಾಡುವ ಸಂಪ್ರದಾಯವಿದೆ. ಚಂದ್ರನ ಆಕಾರಕ್ಕನುಗುಣವಾಗಿ ಭವಿಷ್ಯವನ್ನು ಹೇಳುವ ಪದ್ಧತಿ ಕೆಲವೆಡೆ ಇದೆ.

ಯುಗಾದಿಗೆ ಪೌರಾಣಿಕ ಹಿನ್ನೆಲೆಯಿದೆ. ಸೃಷ್ಟಿಕರ್ತ ಶ್ರೀ ಬ್ರಹ್ಮದೇವರು ಯುಗಾದಿಯಂದು ತನ್ನ ಸೃಷ್ಟಿ ಕೆಲಸ ಆರಂಭಿಸಿದನು ಎಂದು ಹೇಳುತ್ತಾರೆ. ಈ ದಿನಗಳಲ್ಲಿ ಶ್ರೀ ಬ್ರಹ್ಮದೇವರ ಆರಾಧನೆಯನ್ನು ಮಾಡಲಾಗುತ್ತದೆ. ಮಹಾವಿಷ್ಣುವಿನ ಅನೇಕ ಹೆಸರುಗಳಲ್ಲಿ 'ಯುಗಾದಿ ಎಂದರೆ ಯುಗಾದಿ ಕೃತ್' ಎನ್ನುವ ಹೆಸರಿದ್ದು, ಇದರರ್ಥ ಯುಗಗಳನ್ನು ಸೃಷ್ಟಿಸುವವನು ಎಂಬುದಾಗಿರುತ್ತದೆ. ವಿಷ್ಣುವಿನ ಆರಾಧನೆ ಮಾಡುವ ಸಂದರ್ಭವಿದು.

ವೇದಗಳ ಕಾಲದಿಂದಲೂ ಯುಗಾದಿಯನ್ನು ಆಚರಿಸುತ್ತಿರುವ ಬಗೆಗೆ ದಾಖಲೆಯಿದೆ. ಶ್ರೀರಾಮನು ಲಂಕೆಯಲ್ಲಿ ರಾವಣನ ಸಂಹಾರ ಮಾಡಿ ಅಯೋಧ್ಯೆಗೆ ಧಾವಿಸಿ ಪಟ್ಟಾಭಿಷೇಕ ಮಾಡಿಸಿಕೊಂಡ ದಿನ ಯುಗಾದಿ ಎಂಬ ಮಾತಿದೆ. ಮಹಾಭಾರತದ ಉಲ್ಲೇಖದ ಪ್ರಕಾರ, ಚೇದಿ ರಾಜ್ಯದ ದೊರೆ ವಸು, ಇಂದ್ರನನ್ನು ಕುರಿತು ಉಗ್ರ ತಪಸ್ಸು ಮಾಡುತ್ತಾನೆ. ಇಂದ್ರ ಆತನ ತಪಸ್ಸಿಗೆ ಮೆಚ್ಚಿ ವೈಜಯಂತಿ ಮಾಲೆಯನ್ನು ಆತನಿಗೆ ಕೊಡುತ್ತಾನೆ. ಯೋಗಶಾಸ್ತ್ರದ ಪ್ರಕಾರ, ಯುಗಾದಿ ಸೂರ್ಯ ನಮಸ್ಕಾರಕ್ಕೆ ಶ್ರೇಷ್ಠ ದಿನ ಎಂದು ಪರಿಗಣಿತವಾಗಿದೆ.

12ನೆಯ ಶತಮಾನದಲ್ಲಿದ್ದ ಭಾರತದ ಶ್ರೇಷ್ಠ ಗಣಿತಶಾಸ್ತ್ರಜ್ಞ ಭಾಸ್ಕರಾಚಾರ್ಯ ಯುಗಾದಿಯ ಸೂರ್ಯೋದಯದ ಆಧಾರದ ಮೇಲೆ ಹೊಸವರ್ಷ, ಹೊಸತಿಂಗಳು ಮತ್ತು ಹೊಸದಿನವನ್ನು ನಿರ್ಣಯ ಮಾಡಿದ್ದಾನೆ. ಅದನ್ನೇ ಅನುಸರಿಸಿ ಪಂಚಾಂಗವನ್ನು ಬರೆಯಲಾಗುತ್ತದೆ. ಭಾರತದ ಪ್ರಾಚೀನ ವಿಜ್ಞಾನಿಗಳಿಗೆ ಖಗೋಳಶಾಸ್ತ್ರ ಕುರಿತಂತಿದ್ದ ಅಪಾರ ಜ್ಞಾನವನ್ನು ಇಂದಿನ ವಿಜ್ಞಾನಿಗಳು ಸಹ ಮೆಚ್ಚಿರುವುದು ಎಲ್ಲರೂ ತಿಳಿದಿರುವ ವಿಚಾರ.

ವೇದಾಂಗ ಜ್ಯೋತಿಷದ ಪ್ರಕಾರ, ಮೊದಲ ನಕ್ಷತ್ರ ಅಶ್ವಿನಿಯು ಮೇಷ ರಾಶಿಯಲ್ಲಿದ್ದಾಗ ಭೂಮಿಯ ಉತ್ತರಾರ್ಧಗೋಳದಲ್ಲಿ ಸಸ್ಯಗಳು ಚಿಗುರುತ್ತವೆ. ಅಶ್ವಿನಿ ನಕ್ಷತ್ರಕ್ಕೆ ಸೂರ್ಯನ ಪ್ರವೇಶವನ್ನು ಹೊಸವರ್ಷವೆಂದು ಕರೆಯಲಾಗುತ್ತದೆ. ಯುಗಾದಿ ಎರಡು ವಿಧದಲ್ಲಿ ಆಚರಿಸಲಾಗುತ್ತದೆ. ಚಾಂದ್ರಮಾನ ಪದ್ಧತಿ ಮತ್ತು ಸೌರಮಾನ ಪದ್ಧತಿ. ಚಾಂದ್ರಮಾನ ಪದ್ಧತಿಯಲ್ಲಿ ಚಂದ್ರನ ಚಲನೆಯ ಗತಿಯನ್ನಾಧರಿಸಿ ದಿನಗಣನೆ ಮಾಡಲಾಗುವುದು. ಚಂದ್ರನ ಗತಿ ವೇಗವಾಗಿರುವುದರಿಂದ ಆತನ ಪ್ರತಿ ಪ್ರದಕ್ಷಿಣೆಗೂ ಒಂದೊಂದು ತಿಂಗಳು ಅತಿ ಬೇಗ ಬಂದು, 12 ತಿಂಗಳ ನಂತರ ಚಾಂದ್ರಮಾನ ಸಂವತ್ಸರ ಬರುತ್ತದೆ. ಆಗ ಯುಗಾದಿಯನ್ನು ಆಚರಿಸಲಾಗುತ್ತದೆ. ಕರ್ನಾಟಕದಲ್ಲಿ 'ಚಾಂದ್ರಮಾನ ಯುಗಾದಿ'ಯ ಆಚರಣೆ ರೂಢಿಯಲ್ಲಿದೆ. ಸೂರ್ಯನ ಚಲನೆಯ ಗತಿಯನ್ನು ಆಧರಿಸಿ ಆಚರಿಸುವ ಯುಗಾದಿಗೆ 'ಸೌರಮಾನ ಯುಗಾದಿ' ಎನ್ನಲಾಗುತ್ತದೆ.

ಕರ್ನಾಟಕದ ಜನತೆ ಯುಗಾದಿಯನ್ನು ಹೊಸವರ್ಷದ ಹಬ್ಬ ಎಂಬ ಸಂಭ್ರಮದಲ್ಲಿ ಆಚರಿಸುತ್ತದೆ. ವಿಶೇಷ ರೀತಿಯಲ್ಲಿ ಅಭ್ಯಂಗ ಸ್ನಾನ ಮಾಡುತ್ತಾರೆ. ಹೊಸಬಟ್ಟೆ ತೊಟ್ಟು ದೇವರಿಗೆ ಪೂಜೆ ಮಾಡಿ, ಬೇವು- ಬೆಲ್ಲ ತಿನ್ನುತ್ತಾರೆ. ಹೋಳಿಗೆ ಊಟ ಸಾಮಾನ್ಯ. ಸಂಜೆ ಪಂಚಾಂಗ ಶ್ರವಣ ಮಾಡಲಾಗುತ್ತದೆ. ಬೇವು-ಬೆಲ್ಲ ಎನ್ನುವುದು ಜೀವನದ ಸಂದೇಶವನ್ನು ಸಾರುವ ಮಾತುಗಳಾಗಿವೆ. ಕಷ್ಟ-ಸುಖಗಳು ಜೀವನದಲ್ಲಿ ಒಂದರ ಮೇಲೆ ಮತ್ತೊಂದರಂತೆ ಬರುತ್ತವೆ ಎನ್ನುವ ತತ್ವ ಇದರಲ್ಲಿ ಅಡಕವಾಗಿದೆ.

ಮಹಾರಾಷ್ಟ್ರದಲ್ಲಿ ಯುಗಾದಿಯ ಸಂದರ್ಭದಲ್ಲಿ 'ಯುಗಾದಿ ಪಚ್ಚಡಿ' ಎನ್ನುವ ವಿಶೇಷವಾದ ಖಾದ್ಯವನ್ನು ತಯಾರಿಸಲಾಗುತ್ತದೆ. ಇದೊಂದು ಬಗೆಯ ಚಟ್ನಿ. ಇದರಲ್ಲಿ ಕಹಿ, ಸಿಹಿ, ಉಪ್ಪು, ಹುಳಿ ಮತ್ತು ಖಾರದ ಮಿಶ್ರಣವಿರುತ್ತದೆ. ಯುಗಾದಿ ಪಚ್ಚಡಿಗೆ ಐದು ಬಗೆಯ ರುಚಿಯಿರುತ್ತದೆ. ಇದಕ್ಕೆ ವಿಶೇಷವಾದ ಅರ್ಥವನ್ನು ಕೊಡಲಾಗಿದೆ. ಜೀವನದಲ್ಲಿ ಉಪ್ಪು 'ಆಸಕ್ತಿಗೆ' ಹುಳಿ 'ಸವಾಲಿಗೆ' ಕಹಿ 'ಕಷ್ಟಕ್ಕೆ' ಸಿಹಿ 'ಸುಖಕ್ಕೆ' ಹಾಗೂ ಖಾರ 'ಕೋಪದ' ಗುಣಗಳನ್ನು ಪ್ರತಿನಿಧಿಸುತ್ತವೆ.

ಯುಗಾದಿಯು ಬದುಕಿನ ಸಮಗ್ರತೆಯನ್ನು ಸಾರುವ ಹಬ್ಬವಾಗಿದೆ. ಅದಕ್ಕಾಗಿ ಯುಗಾದಿ ಸಂವತ್ಸರ ಕಳೆದರೂ ತನ್ನ ಮಹತ್ವವನ್ನು ಹಾಗೇ ಉಳಿಸಿಕೊಂಡಿದೆ. ಮೈಸೂರು ಮಲ್ಲಿಗೆಯ ಕವಿ ಕೆ.ಎಸ್. ನರಸಿಂಹಸ್ವಾಮಿ ಅವರು ಯುಗಾದಿ ಎನ್ನುವುದು ನಮ್ಮ ಬದುಕಿಗೆ ವ್ಯಾಖ್ಯಾನವಿದ್ದಂತೆ ಎನ್ನುತ್ತಾರೆ. ಅವರ ಮಾತುಗಳು ಹೀಗಿವೆ.

**ಮಾವು ನಾವು ಬೇವು ನಾವು**
**ನೋವು ನಲಿವು ನಮ್ಮವು**
**ಹೂವು ನಾವು ಹಸಿರು ನಾವು**
**ಬೇವು ಬೆಲ್ಲ ನಮ್ಮವು**

## ಶ್ರೀದೇವಿ ಶಿಕ್ಷಣ ಸಂಸ್ಥೆ ಬೇಗ ಖಾಸಗಿ ವಿಶ್ವವಿದ್ಯಾನಿಲಯವಾಗಿ ಮಾರ್ಪಾಡು ಆಗಲಿ

ವೈದ್ಯಕೀಯ ಕಾಲೇಜಿನಲ್ಲಿ ಶ್ರೀ ವಾಗ್ದೇವಿ ಮೂರ್ತಿಯ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಸಚಿವರಾದ ಗೋವಿಂದಗೌಡ ಹಾಗೂ ಎಸ್. ಸುರೇಶಕುಮಾರ್ ಅವರ ಆಪ್ತ ಕಾರ್ಯದರ್ಶಿಯಾಗಿದ್ದ ಮುದ್ದೇನಹಳ್ಳಿಯ ಶ್ರೀ ಸತ್ಯಸಾಯಿ ಖಾಸಗಿ ವಿಶ್ವವಿದ್ಯಾನಿಲಯದ ಸಹ ಕುಲಪತಿಗಳಾಗಿದ್ದ ಡಾ. ಎ.ಆರ್.ಮಂಜುನಾಥ ಅವರು ಮಾತನಾಡುತ್ತಾ "ಮೂರು ದಶಕಗಳಲ್ಲಿ ಡಾ. ಎಂ.ಆರ್.ಹುಲಿನಾಯ್ಕರ್ ಅವರು ನಿರ್ಮಿಸಿರುವ ಶಿಕ್ಷಣ ಸಂಸ್ಥೆಗಳ ವಿಸ್ತಾರವನ್ನು ಕಂಡು ನಾನು ಬೆರಗಾಗಿದ್ದೇನೆ. ಇಲ್ಲಿ ಅತ್ಯುತ್ತಮ ಶೈಕ್ಷಣಿಕ ವಾತಾವರಣವಿದೆ. ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ ಯಥೇಚ್ಛವಾಗಿದೆ. ಉತ್ತಮ ಬೋಧನಾವರ್ಗವಿದೆ. ಮೂಲಭೂತ ಸೌಕರ್ಯ ಚೆನ್ನಾಗಿದೆ. ಇಷ್ಟೊಂದು ಉತ್ತಮ ಅಂಶಗಳಿರುವ ಈ ವಿದ್ಯಾಸಂಸ್ಥೆಗೆ ಖಾಸಗಿ ವಿಶ್ವವಿದ್ಯಾನಿಲಯವಾಗಿ ಸರ್ಕಾರ ಏಕೆ ಮಾನ್ಯತೆ ಕೊಟ್ಟಿಲ್ಲ ಎಂಬುದು ನನಗೆ ಆಶ್ಚರ್ಯ ತಂದಿದೆ. ಈಗಲಾದರೂ ಸರ್ಕಾರವು ಶ್ರೀದೇವಿ ವಿದ್ಯಾಸಂಸ್ಥೆಗೆ ಖಾಸಗಿ ವಿಶ್ವವಿದ್ಯಾನಿಲಯದ ಸ್ಥಾನಮಾನ ಕೊಡುವ ಅಗತ್ಯವಿದೆ ಎಂದು ನಾನು ಭಾವಿಸುತ್ತೇನೆ" ಎಂದು ಅಭಿಪ್ರಾಯಪಟ್ಟರು.



ಪತ್ರಿಕೆಯ ಬಳಗ

ಪ್ರಧಾನ ಸಂಪಾದಕರು
**ಡಾ. ಎಂ. ಆರ್. ಹುಲಿನಾಯ್ಕರ್**

ಗೌರವ ಸಂಪಾದಕರು
**ಡಾ. ಕೆ.ಆರ್.ಕಮಲೇಶ**

ಕಾರ್ಯನಿರ್ವಾಹಕ ಸಂಪಾದಕರು
**ಡಾ. ರಮಣ ಎಂ. ಹುಲಿನಾಯ್ಕರ್**

ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ವಾಲಿನ್**
**ಡಾ. ಮನೋಜ್ಞಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು: **ಎನ್. ಆನಂದ** ಪುಟ ವಿನ್ಯಾಸ: **ಸುಮಾ ಸಾಗರ್**




# ಕ್ಲೋಸ್ ದಿ ಕೇರ್ ಗ್ಯಾಪ್

## *CLOSE THE CARE GAP*

**ಮನದ ಮಾತು**



**ಡಾ. ರಮಣ ಎಂ ಹುಲಿನಾಯ್ಕರ್**
**ಕಾರ್ಯನಿರ್ವಾಹಕ ಸಂಪಾದಕರು**
**ನಿರ್ದೇಶಕರು, ಶ್ರೀದೇವಿ ವೈದ್ಯಕೀಯ ಕಾಲೇಜು**

ಶ್ರೀದೇವಿ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಅಂಡ್ ರಿಸರ್ಚ್ ಆಸ್ಪತ್ರೆಯು ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯ ಸಹಯೋಗದಲ್ಲಿ 'ವಿಶ್ವ ಕ್ಯಾನ್ಸರ್ ದಿನ'ದ ಅಂಗವಾಗಿ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಏರ್ಪಡಿಸಿತ್ತು.

2023ರ ಜನವರಿ 30 ಹಾಗೂ 31ರಂದು ತುಮಕೂರಿನ ಶ್ರೀದೇವಿ ಆಸ್ಪತ್ರೆ ಆವರಣದಲ್ಲಿ ಎರಡು ದಿನಗಳ ಕಾಲ ನಡೆದ ಶಿಬಿರದಲ್ಲಿ ಎರಡೂ ಆಸ್ಪತ್ರೆಗಳ ತಜ್ಞ ವೈದ್ಯರು ಹಾಗೂ ತಂತ್ರಜ್ಞರು ಕ್ಯಾನ್ಸರ್ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡಿದ್ದರು.

ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಶಿಬಿರದ ಕುರಿತು ಪೂರ್ವಭಾವಿ ಪ್ರಚಾರದ ಅಂಗವಾಗಿ ಬ್ಯಾನರ್, ಆಟೋ ಮೂಲಕ ಪ್ರಚಾರ ಮತ್ತು ಪತ್ರಿಕಾ ಪ್ರಕಟಣೆಗಳನ್ನು ನೀಡಲಾಗಿತ್ತು. ಸಾಮಾಜಿಕ ಮಾಧ್ಯಮಗಳು ಮತ್ತು ಟಿ.ವಿ ಮಾಧ್ಯಮಗಳ ಮೂಲಕವೂ ಈ ಕಾರ್ಯಕ್ರಮದ ವಿವರಗಳನ್ನು ಪ್ರಚುರಪಡಿಸಲಾಗಿತ್ತು.

ಎರಡು ದಿನ ನಡೆದ ಶಿಬಿರದಲ್ಲಿ ನೂರಾರು ರೋಗಿಗಳ ತಪಾಸಣೆ ಮಾಡಲಾಯಿತು. ಉಚಿತ ಸಮಾಲೋಚನೆಯ ಜೊತೆ ಮ್ಯಾಮೊಗ್ರಫಿ, ಅಲ್ಟ್ರಾಸೌಂಡ್ ಸ್ಕ್ರೀನಿಂಗ್, ಎಕ್ಸ್‌ರೇ, ಪ್ಯಾಪ್ ಸ್ಮೀಯರ್, ರಕ್ತ ಪರೀಕ್ಷೆಗಳನ್ನು ನಡೆಸಲಾಯಿತು. (Mammography, Ultrasound screening, Xray, Pap Smear, some free blood tests were done.) ಈ ಸಂದರ್ಭದಲ್ಲಿ ತಜ್ಞ ವೈದ್ಯರು ಕ್ಯಾನ್ಸರ್ ಕುರಿತು ಮಾಹಿತಿ ನೀಡಿದ್ದಲ್ಲದೆ, ರೋಗಿಗಳಿಗೆ ಈ ಕುರಿತು ಜಾಗೃತಿ ಮೂಡಿಸುವ ಮೂಲಕ ಶಿಬಿರವನ್ನು ಯಶಸ್ವಿಗೊಳಿಸಿದರು. ಈ ಸಂದರ್ಭ ಸುಮಾರು 35–40 ಮಂದಿಗೆ ಕ್ಯಾನ್ಸರ್ ಇರುವ ಬಗ್ಗೆ ಶಂಕೆ ವ್ಯಕ್ತವಾಯಿತು. ರೋಗಿಗಳಿಗೆ ತಪಾಸಣೆ ನಡೆಸಿ, ನಿರ್ವಹಣೆಯ ಬಗ್ಗೆ ಅವರಿಗೆ ಸಲಹೆಗಳನ್ನು ನೀಡಲಾಯಿತು. ಅವರು ಮುಂದಿನ ದಿನಗಳಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆಯೂ ಸ್ಪಷ್ಟವಾದ ನಿರ್ದೇಶನ ಹಾಗೂ ಸೂಚನೆಗಳನ್ನು ಕೊಡಲಾಯಿತು.

ಆತಂಕಕಾರಿ ಸಂಗತಿಯೆಂದರೆ, ತಪಾಸಣೆಗೆ ಒಳಗಾದ ರೋಗಿಗಳ ಸಂಖ್ಯೆ ಹಾಗೂ ಕ್ಯಾನ್ಸರ್ ಇದೆ ಎಂಬ ಶಂಕೆಯ ಈ ಸಂಖ್ಯೆಗಳು ನಮಗೆ ಅನಿರೀಕ್ಷಿತವಾಗಿದ್ದವು. ಕ್ಯಾನ್ಸರ್ ಎಂಬುದು ಎಲ್ಲರಿಗೂ ತಿಳಿದಿರುವ ಪದ. ಈ "ಕ್ಯಾನ್ಸರ್" ಎಂಬ ಪದವು ಪ್ರತಿಯೊಬ್ಬರಲ್ಲೂ ಒಂದು ರೀತಿಯ ಭಯ ಹಾಗೂ ಆತಂಕದ ಭಾವನೆಯನ್ನು ಉಂಟುಮಾಡುತ್ತದೆ. ವಿಶ್ವದಲ್ಲಿ ಸಾವಿನ ಪ್ರಮುಖ ಕಾರಣಗಳಲ್ಲಿ ಕ್ಯಾನ್ಸರ್ ಕೂಡಾ ಒಂದು ಎನಿಸಿಕೊಂಡಿದೆ.

ಜಾಗತಿಕವಾಗಿ 6 ಮಂದಿಯಲ್ಲಿ ಒಬ್ಬ ವ್ಯಕ್ತಿ ಕ್ಯಾನ್ಸರ್ ಕಾರಣದಿಂದಲೇ ಸಾವಿಗೀಡಾಗುತ್ತಾನೆ. ಇದು ಯುವಕರು, ಹಿರಿಯರು, ಶ್ರೀಮಂತರು, ಬಡವರು, ಪುರುಷರು, ಮಹಿಳೆಯರು ಹಾಗೂ ಮಕ್ಕಳು ಸೇರಿದಂತೆ ಎಲ್ಲರ ಮೇಲೂ ಪರಿಣಾಮ ಬೀರುತ್ತದೆ. ಆದರೂ ಇವುಗಳಲ್ಲಿ ಹಲವು ಸಾವುಗಳನ್ನು ತಪ್ಪಿಸಬಹುದು. ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು. ತಂಬಾಕು ಸೇವನೆಯಿಂದ ದೂರವಿರಬೇಕು. ಸೋಂಕುಗಳಿಗೆ ಕಾರಣವಾಗುವ ಪ್ರತಿರಕ್ಷಣೆಯಂತಹ ಸಾರ್ವಜನಿಕ ಆರೋಗ್ಯ ಕ್ರಮಗಳ ಮೂಲಕ ಇದನ್ನು ನಿಯಂತ್ರಿಸಬಹುದು. ಕ್ಯಾನ್ಸರ್‌ನ್ನು ಮೊದಲೇ ಪತ್ತೆ ಹಚ್ಚಿದರೆ ಚಿಕಿತ್ಸೆ ನೀಡುವ ಮೂಲಕ ಗುಣಪಡಿಸಬಹುದು. ಕೊನೆಯ ಹಂತದ ಕ್ಯಾನ್ಸರ್ ಇದ್ದಾಗಲೂ ರೋಗಿಗೆ ಉತ್ತಮ ಆರೈಕೆ ನೀಡುವ ಜೊತೆಗೆ ಆತನ ನೋವಿನ ತೀವ್ರತೆಯನ್ನು ಕಡಿಮೆ ಮಾಡಬಹುದು.

**ವಿಶ್ವದಾದ್ಯಂತ ಅತ್ಯಂತ ಸಾಮಾನ್ಯವಾಗಿ ಕಂಡುಬರುವ ಕ್ಯಾನ್ಸರ್‌ಗಳೆಂದರೆ:**

| ಪುರುಷರು | ಮಹಿಳೆಯರು |
|---|---|
| ಶ್ವಾಸಕೋಶ (ಲಂಗ್ಸ್) | ಸ್ತನ (ಬ್ರೆಸ್ಟ್) |
| ಯಕೃತ್ತು (ಲಿವರ್) | ಶ್ವಾಸಕೋಶ (ಲಂಗ್ಸ್) |
| ಹೊಟ್ಟೆ (ಸ್ಟಮಕ್) | ಕೊಲೊರೆಕ್ಟಲ್ |
| ಕೊಲೊರೆಕ್ಟಲ್ | ಸರ್ವಿಕಲ್ (ಗರ್ಭಕಂಠ) |
| ಪ್ರೊಸ್ಟೇಟ್ | ಹೊಟ್ಟೆ (ಸ್ಟಮಕ್) |

**ವಿಶ್ವ ಆರೋಗ್ಯ ಸಂಸ್ಥೆಯ ಅಂಕಿಅಂಶಗಳ ಪ್ರಕಾರ, ಶೇಕಡ 30–50ರಷ್ಟು ಕ್ಯಾನ್ಸರ್ ತಡೆಗಟ್ಟಬಹುದು. ಈ ಕೆಳಗಿನ ಪ್ರಮುಖ ಅಪಾಯಕಾರಿ ಅಂಶಗಳನ್ನು ಮಾರ್ಪಡಿಸುವುದು ಅಥವಾ ತಪ್ಪಿಸುವುದು ಕ್ಯಾನ್ಸರ್ ತಡೆಗಟ್ಟಲು ಸಹಕಾರಿಯಾಗುತ್ತದೆ.**

- ಹೊಗೆರಹಿತ ತಂಬಾಕು ಸೇರಿದಂತೆ ತಂಬಾಕು ಬಳಕೆಯನ್ನು ಸಂಪೂರ್ಣವಾಗಿ ತ್ಯಜಿಸುವುದು.
- ಆರೋಗ್ಯಕರ ರೀತಿಯಲ್ಲಿ ತೂಕವನ್ನು ಕಾಪಾಡಿಕೊಳ್ಳುವುದು.
- ಸಾಕಷ್ಟು ಹಣ್ಣುಗಳು ಹಾಗೂ ತರಕಾರಿಗಳೊಂದಿಗೆ ಆರೋಗ್ಯಕರ ಆಹಾರವನ್ನು ಸೇವಿಸುವುದು.
- ನಿತ್ಯ ವ್ಯಾಯಾಮ – ಅಭ್ಯಾಸವನ್ನು ಮೈಗೂಡಿಸಿಕೊಳ್ಳುವುದು.
- ಆಲ್ಕೋಹಾಲ್ ಮಿತವಾಗಿ ಬಳಸುವುದು.
- ಸುರಕ್ಷಿತ ಲೈಂಗಿಕತೆಯನ್ನು ಅಭ್ಯಾಸ ಮಾಡಿಕೊಳ್ಳುವುದು.
- ಹೆಪಟೈಟಿಸ್ ಬಿ ಮತ್ತು ಹ್ಯೂಮನ್ ಪ್ಯಾಪಿಲೋಮವೈರಸ್ (ಹೆಚ್‌ಪಿವಿ) ವಿರುದ್ಧ ಲಸಿಕೆ ಪಡೆಯುವುದು.
- ಅಲ್ಟ್ರಾವೈಲೆಟ್ ರೇಡಿಯೇಷನ್‌ಗೆ ಒಡ್ಡಿಕೊಳ್ಳುವುದನ್ನು ಕಡಿಮೆ ಮಾಡುವುದು.
- ಅನವಶ್ಯಕವಾಗಿ ಅಯಾನೀಕರಿಸುವ ವಿಕಿರಣಕ್ಕೆ ಒಡ್ಡಿಕೊಳ್ಳುವುದನ್ನು ತಡೆಯುವುದು (ಉದಾಹರಣೆಗೆ: ಔದ್ಯೋಗಿಕ ಮಾನ್ಯತೆ ಕಡಿಮೆಗೊಳಿಸುವುದು, ರೋಗನಿರ್ಣಯ ಮತ್ತು ಚಿಕಿತ್ಸೆಯಲ್ಲಿ ವಿಕಿರಣದ ಸುರಕ್ಷಿತ ಮತ್ತು ಸೂಕ್ತವಾದ ವೈದ್ಯಕೀಯ ಬಳಕೆಯನ್ನು ಖಚಿತಪಡಿಸುವುದು).
- ಮನೆಯಲ್ಲಿ ಘನ ಇಂಧನಗಳ ಬಳಕೆ ಮೂಲಕ ನಗರದ ವಾಯುಮಾಲಿನ್ಯ ಮತ್ತು ಒಳಾಂಗಣದ ಹೊಗೆಯನ್ನು ತಪ್ಪಿಸುವುದು.
- ನಿಯಮಿತವಾಗಿ ವೈದ್ಯಕೀಯ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು.
- ಕೆಲವು ದೀರ್ಘಕಾಲದ ಸೋಂಕುಗಳು ಸಹ ಕ್ಯಾನ್ಸರ್‌ಗೆ ಅಪಾಯಕಾರಿ ಅಂಶಗಳಾಗಿವೆ.

ಕಡಿಮೆ ಮತ್ತು ಮಧ್ಯಮ ಆದಾಯ ಹೊಂದಿರುವ ದೇಶದಲ್ಲಿರುವ ಜನರು ದೀರ್ಘಕಾಲದ ಸೋಂಕಿನ ಮೂಲಕ ಕ್ಯಾನ್ಸರ್ ಅನ್ನು ಹೆಚ್ಚಿಸಿಕೊಳ್ಳುವ ಸಾಧ್ಯತೆಯಿದೆ.

ವಿಶ್ವ ಕ್ಯಾನ್ಸರ್ ದಿನವನ್ನು 2000ದಲ್ಲಿ ಮೊದಲ ಬಾರಿಗೆ ಆರಂಭಿಸಲಾಯಿತು. ಅಂದಿನಿಂದ ಸಾರ್ವಜನಿಕರಲ್ಲಿ ಈ ಕುರಿತು ಸಾಕಷ್ಟು ಜಾಗೃತಿ ಮೂಡಿಸಲಾಗುತ್ತಿದೆ. 2022ರಿಂದ 2024ರವರೆಗೆ "ಕ್ಲೋಸ್ ದಿ ಕೇರ್ ಗ್ಯಾಪ್' ಎಂಬುದು ವಿಶ್ವ ಕ್ಯಾನ್ಸರ್ ದಿನದ ಥೀಮ್ ಆಗಿದೆ.

ಕ್ಯಾನ್ಸರ್ ಆರೈಕೆ, ತಡೆಗಟ್ಟುವಿಕೆ, ರೋಗನಿರ್ಣಯ ಮತ್ತು ಚಿಕಿತ್ಸೆಯಲ್ಲಿ ನಾವು ಸಾಕಷ್ಟು ಪ್ರಗತಿಯನ್ನು ಕಾಣುತ್ತಿದ್ದೇವಾದರೂ ನಮ್ಮಲ್ಲಿ ಕ್ಯಾನ್ಸರ್ ಆರೈಕೆಯ ಅಗತ್ಯವಿರುವ ಅನೇಕರು ಪ್ರತಿ ಹಂತದಲ್ಲೂ ವಿವಿಧ ಮಾರ್ಗಗಳನ್ನು ಕಂಡುಕೊಳ್ಳುವ ಮೂಲಕ ನಿರ್ಲಕ್ಷ್ಯವನ್ನು ವಹಿಸುತ್ತಾರೆ. ಇದು ಆದಾಯ, ಶಿಕ್ಷಣ, ಭೌಗೋಳಿಕ ಸ್ಥಳ, ಜನಾಂಗೀಯತೆ, ಲಿಂಗ, ಲೈಂಗಿಕ ದೃಷ್ಟಿಕೋನ, ವಯಸ್ಸು, ಅಂಗವೈಕಲ್ಯ ಮತ್ತು ಜೀವನಶೈಲಿಯ ಆಧಾರದ ಮೇಲಿನ ತಾರತಮ್ಯವಾಗಿರುತ್ತದೆ. ಇವು ಆರೈಕೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಕೆಲವು ಅಂಶಗಳಾಗಿರುತ್ತವೆ.

ವಿಶ್ವ ಕ್ಯಾನ್ಸರ್ ದಿನವು ಕೇವಲ ಆಸ್ಪತ್ರೆಗಳು ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳಿಗೆ ಸೀಮಿತವಾಗಿಲ್ಲ. ಸಾರ್ವಜನಿಕರು, ಸ್ಥಳೀಯ ವ್ಯವಹಾರಗಳು, ನಿಗಮಗಳು ಮತ್ತು ಸರ್ಕಾರಗಳು ಎಲ್ಲರೂ ಒಟ್ಟಾಗಿ ಕ್ಯಾನ್ಸರ್‌ನ ವಿಧಗಳು, ಅದರ ಬಗ್ಗೆ ತಿಳಿವಳಿಕೆ ಹಾಗೂ ಪತ್ತೆಯ ಸಂದರ್ಭದಲ್ಲಿ ತೆಗೆದುಕೊಳ್ಳಬಹುದಾದ ಸಂಭಾವ್ಯ ಚಿಕಿತ್ಸೆಗಳು ಮತ್ತು ಕ್ರಮಗಳ ಬಗ್ಗೆ ತಿಳಿವಳಿಕೆ ನೀಡಲು ಒಟ್ಟಾಗಿ ಕೈಜೋಡಿಸುವುದು ಅತ್ಯಗತ್ಯ.

ರೇಡಿಯೋ, ದೂರದರ್ಶನ, ಮುದ್ರಣ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಈಗಾಗಲೇ ಜಾಹೀರಾತುಗಳು ಮತ್ತು ಪ್ರಮುಖ ಪ್ರಕಟಣೆಗಳನ್ನು ನೀಡಲಾಗಿದೆ

ಶ್ರೀದೇವಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಕ್ಯಾನ್ಸರ್ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ನಿರಂತರ ಪ್ರಕ್ರಿಯೆಯನ್ನು ನಡೆಸುತ್ತಿದ್ದೇವೆ. 16 ಸ್ಲೈಸ್ ಸಿ.ಟಿ ಸ್ಕ್ಯಾನ್, 3 ಟೆಸ್ಲಾ ಎಂಆರ್‌ಐ, ಮ್ಯಾಮೋಗ್ರಫಿ, ಅಲ್ಟ್ರಾಸೌಂಡ್, ಎಂಡೋಸ್ಕೋಪಿ, ಕೊಲೊನೋಸ್ಕೋಪಿ, ಬ್ರಾಂಕೋಸ್ಕೋಪಿ, ಹಿಸ್ಟರೋಸ್ಕೋಪಿ, ಡಯಾಗ್ನೋಸ್ಟಿಕ್, ಲ್ಯಾಪರೋಸ್ಕೋಪಿ, ಕ್ಯಾನ್ಸರ್ ಟ್ಯೂಮರ್ ಹಿಸ್ಟೋಪೆಥಾಲಜಿ ಮುಂತಾದ ರೋಗನಿರ್ಣಯ ಸಾಧನಗಳನ್ನು ಕ್ಯಾನ್ಸರ್ ಆರಂಭಿಕ ಪತ್ತೆಗಾಗಿ ನಮ್ಮ ಆಸ್ಪತ್ರೆಯಲ್ಲಿ ಅಳವಡಿಸಲಾಗಿದೆ. (All the diagnostic tools for detecting cancers like 16 Slice CT scan, 3 Tesla MRI, Mammography, Ultrasound, Endoscopy, Colonoscopy, Bronchoscopy, Hysteroscopy, Diagnostic Laparoscopy, Cancer&Tumour Markers, Cancer Histopathology which are equipped in our hospital)

ಕ್ಯಾನ್ಸರ್ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮತ್ತು ಎಲ್ಲಾ ಕ್ಯಾನ್ಸರ್ ರೋಗನಿರ್ಣಯ ಸಾಧನಗಳ ಸಹಾಯದಿಂದ ಕ್ಯಾನ್ಸರ್ ಅನ್ನು ಮೊದಲೇ ಪತ್ತೆ ಹಚ್ಚುವ ಮೂಲಕ ಕ್ಯಾನ್ಸರ್‌ನಿಂದ ಒದಗುವ ಅಪಾಯಗಳನ್ನು ನಿಗ್ರಹಿಸಲು ಸಾಧ್ಯವಾಗುತ್ತದೆ.

# ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಶ್ರೀವಾಗ್ದೇವಿ ಪ್ರತಿಮೆಯ ಲೋಕಾರ್ಪಣೆ



ಶಿಲ್ಪಿ ಸುರಾಲ ವೆಂಕಟರಮಣ ಭಟ್ಟರಿಗೆ ಸನ್ಮಾನ.

ದೈವಭಕ್ತಿಯಿಂದ ಏಕಾಗ್ರತೆ, ವೃತ್ತಿಯಲ್ಲಿ ಕೌಶಲವನ್ನು ಸಾಧಿಸಬಹುದು. ವೈದ್ಯರು ದೈವಭಕ್ತಿಯನ್ನು ಬೆಳೆಸಿಕೊಂಡರೆ ಅವರಲ್ಲಿ ಮಾನವೀಯ ಗುಣಗಳು ಹೆಚ್ಚಳವಾಗುತ್ತವೆ. ನಾನು ಎಂಬಿಬಿಎಸ್ ವ್ಯಾಸಂಗ ಮಾಡುತ್ತಿರುವಾಗ ನಮ್ಮ ಕಾಲೇಜ್‌ಗೆ ಶ್ರೀ ಸತ್ಯಸಾಯಿಬಾಬಾ ಅವರು ಬಂದಿದ್ದರು. ನಮ್ಮ ಅನೇಕ ಅಧ್ಯಾಪಕರು ಅವರ ಪರಮಭಕ್ತರು. ವೈದ್ಯರಲ್ಲಿ ಮಾನವೀಯ ಅಂಶಗಳು ಬೆಳೆಯಬೇಕಾದರೆ ಅವರು ದೈವಶಕ್ತಿಗೆ ಶರಣಾಗಬೇಕು ಎಂದು ಬಾಬಾ ಆಗ ಹೇಳಿದ್ದರು. ನಂತರ ಬಾಬಾ ವೈಟ್‌ಫೀಲ್ಡ್‌ನಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಪ್ರಾರಂಭಿಸಿದಾಗ ನಮ್ಮ ಅನೇಕ ಅಧ್ಯಾಪಕರು ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ ಅಲ್ಲಿಗೆ ಹೋಗಿ ಉಚಿತ ಸೇವೆ ಸಲ್ಲಿಸಿದ್ದರು. ಪ್ರಾಯಶಃ ಜಗತ್ತಿನಲ್ಲಿ ಬಿಲ್ಲಿಂಗ್ ಇಲ್ಲದ ಏಕೈಕ ಆಸ್ಪತ್ರೆ ಶ್ರೀ ಸತ್ಯಸಾಯಿ ಬಾಬಾ ಅವರು ಪ್ರಾರಂಭಿಸಿದ ಆಸ್ಪತ್ರೆ. ಇಂದಿಗೂ ಆ ಆಸ್ಪತ್ರೆ ಅದೇ ರೀತಿ ಸೇವೆ ಸಲ್ಲಿಸುತ್ತಿದೆ. ಹಸಿದವರಿಗೆ ಒಂದು ತುತ್ತು ಅನ್ನ ನೀಡಿದರೆ ಹೇಗೆ ಆತ ಅನ್ನ ಕೊಟ್ಟವರನ್ನು ತನ್ನ ಬದುಕಿನ ಕೊನೆಯತನಕ ನೆನೆಯುತ್ತಾನೋ ಅದೇ ರೀತಿ ನೋವಿನಿಂದ ಬಳಲುತ್ತಿರುವ ರೋಗಿಗೆ ವೈದ್ಯರು ಪರಿಹಾರ ನೀಡಿದರೆ ಆತನ ಪಾಲಿಗೆ ಅವರೇ ದೇವರು ಆಗುತ್ತಾರೆ. ಈ ಪುಣ್ಯ ವೈದ್ಯರಿಗೆ ಅಲ್ಲದೆ ಬೇರೆ ಯಾರಿಗೂ ದೊರೆಯುವುದಿಲ್ಲ. ಅದಕ್ಕೇ ನಮ್ಮಲ್ಲಿ ವೈದ್ಯರನ್ನು ಸಾಕ್ಷಾತ್ ನಾರಾಯಣ ಎಂದೇ ಪರಿಗಣಿಸುತ್ತಾರೆ.

"ದೈವಭಕ್ತಿಯಿಂದ ಏಕಾಗ್ರತೆ ಮತ್ತು ವೃತ್ತಿ ಕೌಶಲವನ್ನು ಕಲಿಯಲು ವೈದ್ಯಕೀಯ ವಿದ್ಯಾರ್ಥಿಗಳಿಗೆ ಪ್ರೇರಣೆ ದೊರೆಯಲಿ ಎಂದು ಅವರ ವ್ಯಾಸಂಗದ ಸ್ಥಳದಲ್ಲಿ ಶ್ರೀ ವಾಗ್ದೇವಿಯನ್ನು ಪ್ರತಿಷ್ಠಾಪಿಸಲಾಗಿದೆ" ಎಂದು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್ ತಿಳಿಸಿದರು. ನಗರದ ಶಿರಾ ರಸ್ತೆಯಲ್ಲಿರುವ ಶ್ರೀದೇವಿ ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಆಸ್ಪತ್ರೆಯ ಆವರಣದಲ್ಲಿರುವ ಶ್ರೀದೇವಿ ಮಂದಿರ ಪ್ರತಿಷ್ಠಾಪನಾ ಮಹೋತ್ಸವದಲ್ಲಿ ಅವರು ಮಾತನಾಡಿದರು.

▶▶ 7ನೇ ಪುಟಕ್ಕೆ...

# ಎಂ.ಬಿ.ಎ. ಪದವೀಧರರಿಗೆ ಸಾಗರದ ಆಚೆಗೂ ಉದ್ಯೋಗ ಅವಕಾಶ

"ಎಂ.ಬಿ.ಎ. ವಿದ್ಯಾರ್ಥಿಗಳು ಶ್ರದ್ಧೆ, ಆತ್ಮವಿಶ್ವಾಸ, ಸಮಯಪ್ರಜ್ಞೆಯೊಂದಿಗೆ ವಿದ್ಯಾಭ್ಯಾಸ ಮಾಡಬೇಕು. ಜೊತೆಗೆ ಸಾಮಾಜಿಕ ಮತ್ತು ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡರೆ ಅವರ ವಿದ್ಯೆ ಮತ್ತು ಪದವಿಗೆ ನಿಜವಾದ ಅರ್ಥ ಬರುತ್ತದೆ. ಬದುಕಿನಲ್ಲಿ ಯಶಸ್ವಿಯಾಗುತ್ತಾರೆ. ಎಂ.ಬಿ.ಎ. ಕಲಿಕೆಯಲ್ಲಿ ಕೌಶಲ ಮತ್ತು ಸಂವಹನ ಅತಿಮುಖ್ಯವಾಗಿದ್ದು, ಆರ್ಥಿಕ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಇವುಗಳನ್ನು ಅನ್ವಯಿಸಿಕೊಂಡರೆ ಸಾಗರದ ಆಚೆಗೂ ಅಂದರೆ ವಿದೇಶಗಳಲ್ಲೂ ಈ ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶ ಲಭ್ಯವಿದೆ" ಎಂದು ಕುಣಿಗಲ್‌ನ ಜಿ.ಎಫ್.ಜಿ.ಸಿ. ಮಾಜಿ ಪ್ರಾಂಶುಪಾಲರಾದ ಡಾ. ಎಂ.ಎಸ್.ನರಸಿಂಹನ್ ಅವರು ತುಮಕೂರಿನ ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಎಂ.ಬಿ.ಎ. ವಿಭಾಗದ ವತಿಯಿಂದ ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಸ್ವಾಗತ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಾ ಹೇಳಿದರು.

ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಮುಖ್ಯಸ್ಥರಾದ ಡಾ. ಎಂ.ಆರ್.ಹುಲಿನಾಯ್ಕರ್‌ರವರು "ಹೊಸಬರಾದ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳ ಸಾಧ್ಯತೆಗಳನ್ನು ಒದಗಿಸಿಕೊಡಲು ಸಂಸ್ಥೆಯ ವತಿಯಿಂದ ಸರ್ವ ಪ್ರಯತ್ನವನ್ನು ಮಾಡಲಾಗುವುದು" ಎನ್ನುವ ಭರವಸೆ ನೀಡಿ ಎಲ್ಲರಿಗೂ ಶುಭ ಹಾರೈಸಿದರು. ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು ಮಾತನಾಡುತ್ತಾ "ಉತ್ತಮ ವೃತ್ತಿ ಭವಿಷ್ಯಕ್ಕಾಗಿ ವಿವಿಧ ಕ್ಷೇತ್ರಗಳ ತರಬೇತುದಾರರನ್ನು ಕರೆಸಿ ತರಬೇತಿ ನೀಡುವ ಸಕಲ ಪ್ರಯತ್ನವನ್ನೂ ನಮ್ಮ ಸಂಸ್ಥೆ ಹಿಂದಿನಿಂದಲೂ ಮಾಡಿಕೊಂಡು ಬಂದಿರುವ ಕಾರಣ, ಇಲ್ಲಿ ವ್ಯಾಸಂಗ ಮಾಡಿದ ಪದವೀಧರರಿಗೆ ಉತ್ತಮ ಉದ್ಯೋಗ ಅವಕಾಶಗಳು ದೊರಕಿವೆ. ಹೊಸ ವಿದ್ಯಾರ್ಥಿಗಳು ಇವುಗಳ ಪ್ರಯೋಜನ ಪಡೆದುಕೊಂಡು ತಮ್ಮ ಭವಿಷ್ಯವನ್ನು ಉಜ್ವಲವಾಗಿಸಿಕೊಳ್ಳಬೇಕು" ಎಂದು ತಿಳಿಸಿದರು. ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ ಎಂ. ಹುಲಿನಾಯ್ಕರ್, ಶ್ರೀದೇವಿ ಟ್ರಸ್ಟ್‌ನ ಅಂಬಿಕಾ ಎಂ. ಹುಲಿನಾಯ್ಕರ್‌ರವರು ವಿದ್ಯಾರ್ಥಿಗಳಿಗೆ ಶುಭ ಕೋರಿದರು.



ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಎಂ.ಬಿ.ಎ. ಮೊದಲ ವರ್ಷದ ವಿದ್ಯಾರ್ಥಿಗಳಿಗೆ ಹಿರಿಯ ವಿದ್ಯಾರ್ಥಿಗಳು ಸ್ವಾಗತ ಸಮಾರಂಭವನ್ನು ಹಮ್ಮಿಕೊಂಡಿದ್ದರು. ಕುಣಿಗಲ್‌ನ ಜಿ.ಎಫ್.ಜಿ.ಸಿ. ಮಾಜಿ ಪ್ರಾಂಶುಪಾಲರಾದ ಡಾ. ಎಂ.ಎಸ್.ನರಸಿಂಹನ್, ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ನರೇಂದ್ರ ವಿಶ್ವನಾಥ್, ಶ್ರೀದೇವಿ ಸಂಸ್ಥೆಯ ಎಂ.ಬಿ.ಎ. ವಿಭಾಗದ ಮುಖ್ಯಸ್ಥರಾದ ಡಾ. ಕೆ.ಎಸ್.ರಾಮಕೃಷ್ಣ, ಪ್ರೊ. ಪ್ರತಾಪ್, ಡಾ. ಗ್ರೇಸ್ ಹೇಮಲತಾ, ಪ್ರೊ. ಪ್ರವೀಣ್ ಕುಮಾರ್, ಪ್ರೊ. ಬಿಂದು, ಪ್ರೊ. ದಿವ್ಯಾ ಮುಂತಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ನರೇಂದ್ರ ವಿಶ್ವನಾಥ್‌ರವರು ಮಾತನಾಡುತ್ತಾ "ಯಾವುದೇ ಕುಟುಂಬದಲ್ಲಿ ತಾಯಿ ಅತ್ಯುತ್ತಮ ಮಾರ್ಗದರ್ಶಕಳು ಮತ್ತು ವ್ಯವಸ್ಥಾಪಕಳಾಗಿರುತ್ತಾಳೆ. ಅದೇ ರೀತಿಯಲ್ಲಿ ಯಾವುದೇ ಸಂಸ್ಥೆಯಲ್ಲಿ ವ್ಯವಸ್ಥಾಪಕರು ತಾಯಿಯಂತೆ ಎಲ್ಲರನ್ನೂ ಕಾಪಾಡಿ ಮಾರ್ಗದರ್ಶನ ನೀಡುತ್ತಾರೆ. ಅದರಿಂದ ವಿದ್ಯಾರ್ಥಿಗಳಿಗೆ ಯಶಸ್ಸು ಕಟ್ಟಿಟ್ಟ ಬುತ್ತಿ" ಎಂದು ವಿವರಿಸಿದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ಸಂಸ್ಥೆಯ ಎಂ.ಬಿ.ಎ. ವಿಭಾಗದ ಮುಖ್ಯಸ್ಯರಾದ ಡಾ. ಕೆ.ಎಸ್.ರಾಮಕೃಷ್ಣರವರು ಮಾತನಾಡುತ್ತಾ "ಪದವಿ ಕಲಿಕೆಯ ಪ್ರತಿವರ್ಷದುದ್ದಕ್ಕೂ ಶೈಕ್ಷಣಿಕ ಪಠ್ಯದ ಜೊತೆಗೆ ಹಲವಾರು ಪಠ್ಯೇತರ ಚಟುವಟಿಕೆಗಳಾದ ಕೈಗಾರಿಕಾ ಭೇಟಿ, ಸೆಮಿನಾರ್, ಸಮಾವೇಶ, ಕಾರ್ಯಾಗಾರ, ನಿರ್ವಹಣಾ ಕ್ಲಬ್ ಚಟುವಟಿಕೆ, ತರಬೇತಿ, ಇತರೆ ಚಟುವಟಿಕೆಗಳು ನಡೆಯುತ್ತಿರುತ್ತವೆ. ಅದರಲ್ಲಿ ವಿದ್ಯಾರ್ಥಿಗಳು ತಪ್ಪದೇ ಭಾಗವಹಿಸಿ ಪ್ರಯೋಜನ ಪಡೆದುಕೊಂಡರೆ ಅವರ ಭವಿಷ್ಯದ ಬದುಕು ಸುಗಮವಾಗುತ್ತದೆ" ಎಂದು ಹೇಳಿ ಶುಭ ಹಾರೈಸಿದರು.


ಶ್ರೀದೇವಿ ಪದವಿ ಮತ್ತು ಸ್ನಾತಕೋತ್ತರ ಕೇಂದ್ರ ಹಾಗೂ ತುಮಕೂರು ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಪುರುಷರ ಅಂತರ ಕಾಲೇಜಿನ ಖೋ–ಖೋ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿತ್ತು. ಚಿತ್ರದಲ್ಲಿ ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ. ಎ.ಎಂ. ಮಂಜುನಾಥ್, ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ. ಹುಲಿನಾಯ್ಕರ್, ರಾಘವೇಂದ್ರ ಜಟ್ಟೆಣ್ಣ ಹಾಗೂ ವಿವಿಧ ಕಾಲೇಜುಗಳ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರು, ಮುಖ್ಯಸ್ಥರು ಹಾಗೂ ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಪುರುಷರ ಅಂತರಕಾಲೇಜಿನ ಖೋ–ಖೋ ಪಂದ್ಯಾವಳಿ

"ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಮಾನಸಿಕ ಒತ್ತಡ ಹೆಚ್ಚಾಗಿರುವುದರಿಂದ ಕ್ರೀಡಾಭ್ಯಾಸವು ಅಂತಹ ಒತ್ತಡವನ್ನು ಕಡಿಮೆ ಮಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ವಿದ್ಯಾರ್ಥಿಗಳಿಗೆ ಪಠ್ಯ ಚಟುವಟಿಕೆಯ ಜೊತೆಗೆ ಕ್ರೀಡೆಯೂ ಅವಶ್ಯಕವಾಗಿರುತ್ತದೆ. ಕ್ರೀಡೆಯಿಂದ ಮಾನಸಿಕ ಮತ್ತು ದೈಹಿಕ ಸದೃಢತೆಯನ್ನು ಹೊಂದಬಹುದು. ಕ್ರೀಡೆ ಎಂಬುದು ಸ್ಪರ್ಧಾತ್ಮಕ ಮತ್ತು ಕೌಶಲದಿಂದ ಕೂಡಿರುವ ಚಟುವಟಿಕೆಯಾಗಿದ್ದು, ಪ್ರತಿಯೊಬ್ಬರೂ ಕ್ರೀಡಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮನಸ್ಸಿಗೆ ಉಲ್ಲಾಸವನ್ನು ತಂದುಕೊಳ್ಳಬಹುದು. ಕ್ರೀಡೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಪ್ರಯತ್ನ ನಿರಂತರವಾಗಿ ನಡೆಯಬೇಕು" ಎಂದು ತುಮಕೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ. ಎ.ಎಂ. ಮಂಜುನಾಥ್‌ರವರು ತಿಳಿಸಿದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್.ಹುಲಿನಾಯ್ಕರ್‌ರವರು ಮಾತನಾಡುತ್ತಾ 'ಮಾನಸಿಕ ಮತ್ತು ದೈಹಿಕ ದೃಢತೆಗೆ ಕ್ರೀಡೆ ಅತ್ಯಂತ ಶ್ರೇಷ್ಠ ಸಾಧನವಾಗಿದೆ' ಎನ್ನುತ್ತಾ ಎಲ್ಲಾ ವಿದ್ಯಾರ್ಥಿಗಳಿಗೂ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ. ಹುಲಿನಾಯ್ಕರ್ ಅವರು ಮಾತನಾಡುತ್ತಾ 'ಪ್ರತಿಯೊಬ್ಬ ವಿದ್ಯಾರ್ಥಿಯೂ ಕ್ರೀಡಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಪಠ್ಯೇತರ ಚಟುವಟಿಕೆಯ ಜೊತೆಯಲ್ಲಿ ದೈಹಿಕ ಶಿಕ್ಷಣವೂ ಅವಶ್ಯಕವಾಗಿದೆ. ಉಜ್ವಲ ಭವಿಷ್ಯವನ್ನು ರೂಪಿಸಲು ಕ್ರೀಡೆ ಅವಶ್ಯಕವಾಗಿದೆ. ರಾಷ್ಟ್ರ – ರಾಷ್ಟ್ರಗಳ ನಡುವೆ ಸಹೃದಯತೆ ಮತ್ತು ಸಹಕಾರ ಏರ್ಪಡಿಸಲು ಕ್ರೀಡೆಯೂ ಒಂದು ಮಾಧ್ಯಮವಾಗಿದೆ" ಎಂದರು.

ಇದೇ ಸಂದರ್ಭದಲ್ಲಿ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್‌ರವರು ಮಾತನಾಡುತ್ತಾ "ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡಲು ಹಾಗೂ ಆತ್ಮವಿಶ್ವಾಸವನ್ನು ಹೆಚ್ಚಿಸಲು ಇಂತಹ ಕ್ರೀಡಾ ಚಟುವಟಿಕೆಗಳು ಸಹಾಯಕ" ಎಂದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ಪದವಿ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ರಾಘವೇಂದ್ರ ಜಟ್ಟೆಣ್ಣ ಹಾಗೂ ವಿವಿಧ ಕಾಲೇಜುಗಳ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರು, ಮುಖ್ಯಸ್ಥರು ಮತ್ತು ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಪ್ರಥಮ ವರ್ಷದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಬಿಳಿವರ್ಣದ ಸಮವಸ್ತ್ರಧಾರಣೆ ಸಮಾರಂಭ-2023

"ವೈದ್ಯಕೀಯ ಶಿಕ್ಷಣಕ್ಷೇತ್ರದಲ್ಲಿ ಕಲಿಕೆ ಎಂಬುದು ನಿರಂತರವಾಗಿ ಅನುಸರಿಸುವ ವಿಧಾನವಾಗಿರುತ್ತದೆ. ಅದಕ್ಕೆ ಕೊನೆ ಮೊದಲು ಎಂಬುದಿಲ್ಲ, ನೈಪುಣ್ಯತೆ, ಕಾರ್ಯದಕ್ಷತೆ ಮತ್ತು ಆಳವಾದ ಜ್ಞಾನವನ್ನು ವೈದ್ಯಕೀಯಕ್ಷೇತ್ರ ಬಯಸುತ್ತದೆ. ನಿರಂತರ ಅಧ್ಯಯನ, ಪರಿಶ್ರಮ ಹಾಗೂ ತರಗತಿಗಳಿಗೆ ತಪ್ಪದೇ ಹಾಜರಾತಿ, ಗುರು–ಹಿರಿಯರಲ್ಲಿ ಗೌರವ. ರೋಗಿಗಳೊಂದಿಗೆ ಮಾನವೀಯತೆಯ ವರ್ತನೆ ಹಾಗೂ ಅವರ ಕಷ್ಟಕ್ಕೆ ಅನುಕಂಪದಿಂದ ಸ್ಪಂದಿಸುವುದನ್ನು ವೈದ್ಯಕೀಯ ಕ್ಷೇತ್ರಕ್ಕೆ ಬರುವ ವಿದ್ಯಾರ್ಥಿಗಳು ಮೊದಲು ಕಲಿಯಬೇಕಾದ ವಿಚಾರಗಳಾಗಿವೆ. ವೈದ್ಯಕೀಯ ಕ್ಷೇತ್ರ ಎಲ್ಲಾ ರಾಷ್ಟ್ರಗಳಲ್ಲೂ ಅತ್ಯಮೂಲ್ಯವಾದ ಕ್ಷೇತ್ರವಾಗಿರುತ್ತದೆ.

ಅತ್ಯಧಿಕ ಗೌರವವಿರುವ ವೃತ್ತಿ ಎಂದರೆ ಅದು ವೈದ್ಯಕೀಯ ವೃತ್ತಿಯಾಗಿರುತ್ತದೆ. ನಮ್ಮ ಶ್ರೀದೇವಿ ವೈದ್ಯಕೀಯ ಸಂಸ್ಥೆ ಸಮಾಜದ ಕಟ್ಟಕಡೆಯ ರೋಗಿಗೆ ಉತ್ತಮ ಆರೋಗ್ಯ ನೀಡುವಲ್ಲಿ ಮುಂಚೂಣಿಯ ಸ್ಥಾನದಲ್ಲಿದೆ" ಎಂದು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರಕುಮಾರ್ ಅವರು ನಗರದ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಇತ್ತೀಚಿಗೆ ಶ್ರೀದೇವಿ ವೈದ್ಯಕೀಯ ಕಾಲೇಜಿನ ಆವರಣದಲ್ಲಿ ನೂತನವಾಗಿ ಪ್ರವೇಶ ಪಡೆದಿರುವ 2022–23 ನೇ ಸಾಲಿನ ಪ್ರಥಮ ವರ್ಷದ ವೈದ್ಯಕೀಯ ವಿದ್ಯಾರ್ಥಿಗಳಿಗೆ ವೈದ್ಯ ವೃತ್ತಿಯ ಸಂಕೇತವಾಗಿರುವ ಬಿಳಿ ವರ್ಣದ ಸಮವಸ್ತ್ರ ಧಾರಣೆ (White Coat Ceremony) ಸಮಾರಂಭದಲ್ಲಿ ಮಾತನಾಡುತ್ತಾ ತಿಳಿಸಿದರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಉಪಪ್ರಾಂಶುಪಾಲರಾದ ಡಾ.ರೇಖಾ ಗುರುಮೂರ್ತಿ ಅವರು ಮಾತನಾಡುತ್ತಾ "ರೋಗಿಗಳ ಎಲ್ಲಾ ಸಮಸ್ಯೆಗಳಿಗೆ ನಾವು ಸಮಯಕ್ಕೆ ಸರಿಯಾಗಿ ಸ್ಪಂದಿಸಿ ಅವರನ್ನು ಗೌರವದಿಂದ ನಡೆಸಿಕೊಳ್ಳಬೇಕು ಹಾಗೂ ಈ ಶ್ವೇತ ಸಮವಸ್ತ್ರ ವೈದ್ಯಕೀಯ ಲೋಕದ ಸಂಕೇತವಾಗಿದ್ದು, ಇದು ಸದಾ ವೈದ್ಯರಿಗೆ ಅವರ ಜವಾಬ್ದಾರಿಯನ್ನು ಅರಿವನ್ನು ನೀಡುತ್ತದೆ" ಎಂದರು.

▪ ವರದಿ: ಎನ್. ಆನಂದ



ಚಿತ್ರದಲ್ಲಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಹರೇಂದ್ರಕುಮಾರ್, ಉಪಪ್ರಾಂಶುಪಾಲರಾದ.ಡಾ.ರೇಖಾಗುರುಮೂರ್ತಿ, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ.ಮೋಹನ್‌ಕುಮಾರ್, ಡಾ.ಹೇಮಂತ್‌ರಾಜ್, ಡಾ.ಟಿ.ಜೆ.ಸತೀಶ್, ಡಾ.ಜಿ.ವಿ.ಕವನ, ಡಾ.ಡಿ.ಕೆ. ಮಹಾಬಲರಾಜು, ಡಾ.ವಿರುಪಾಕ್ಷಪ್ಪ, ಡಾ. ನರೇಂದ್ರ ವಿಭಾಗಗಳ ಮುಖ್ಯಸ್ಥರು ಮತ್ತು ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

■ ವಿಶೇಷ ಲೇಖನ

# ಇತಿಹಾಸ ಸೃಷ್ಟಿಸಿದ ಬಿ.ಎಸ್.ಯಡಿಯೂರಪ್ಪ


■ **ಡಾ.ಎಂ.ಆರ್.ಹುಲಿನಾಯ್ಕರ್**
**ಸಂಸ್ಥಾಪಕ ಅಧ್ಯಕ್ಷರು**
**ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ**

ಭಾರತದ ರಾಜಕಾರಣಿಗಳಿಗೆ ನಿವೃತ್ತಿ ಎಂಬುದೇ ಇಲ್ಲ, ಅವರು ಸದಾ ಚುನಾವಣೆಯ ಜಪ ಮಾಡುತ್ತಿರುತ್ತಾರೆ, ಅವರು ವ್ಹೀಲ್ ಕುರ್ಚಿಯಲ್ಲಿ ಬೇಕಾದರೂ ಕುಳಿತು ಚುನಾವಣೆ ಎದುರಿಸುವ ಸಾಹಸಿಗಳು... ಎಂದೆಲ್ಲಾ ಜನಸಾಮಾನ್ಯರು ಮಾತನಾಡಿಕೊಳ್ಳುತ್ತಿರುತ್ತಾರೆ. ಈ ಮಾತುಗಳು ಎಲ್ಲರ ಗಮನಕ್ಕೂ ಬಂದಿರುತ್ತವೆ.

ಮೊನ್ನೆ ಫೆಬ್ರುವರಿ 25ರಂದು ಮುಕ್ತಾಯಗೊಂಡ ಕರ್ನಾಟಕ ವಿಧಾನಸಭೆ ಹತ್ತು ಹಲವು ದೃಷ್ಟಿಯಿಂದ ಪ್ರಮುಖವಾದದ್ದು. ಮಾಜಿ ಮುಖ್ಯಮಂತ್ರಿ ಹಾಗೂ ವಿಧಾನಸಭೆಯ ಹಿರಿಯ ಸದಸ್ಯರಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಮಾಡಿದ ವಿದಾಯ ಭಾಷಣದ ಬಗ್ಗೆ ಎಲ್ಲೆಡೆ ಚರ್ಚೆ ನಡೆಯುತ್ತಿರುವುದು ಕರ್ನಾಟಕದ ಜನತೆಯ ರಾಜಕೀಯ ಪ್ರಬುದ್ಧತೆಯನ್ನು ತೋರಿಸುತ್ತದೆ. ಮಾನ್ಯ ಯಡಿಯೂರಪ್ಪ ಅವರು ತಮ್ಮ ವಿದಾಯ ಭಾಷಣದಲ್ಲಿ 'ಇನ್ನು ಮುಂದೆ ನಾನು ಚುನಾವಣೆಗೆ ಸ್ಪರ್ಧಿಸುವುದಿಲ್ಲ' ಎಂದು ಘೋಷಿಸಿದ್ದಾರೆ. ಪ್ರಾಯಶಃ, ತಾವಿನ್ನು ಚುನಾವಣಾ ರಾಜಕೀಯದಿಂದ ನಿವೃತ್ತಿಯಾಗುವುದಾಗಿ ವಿಧಾನಸಭೆಯಲ್ಲೇ ಘೋಷಿಸಿದ ಮೊದಲ ವ್ಯಕ್ತಿ ಶ್ರೀ ಯಡಿಯೂರಪ್ಪನವರಿರಬಹುದು ಎನ್ನುವುದು ನನ್ನ ಭಾವನೆ.

ವಿಧಾನಸಭೆಯ ಕೊನೆಯ ದಿನಗಳಲ್ಲಿ ಬಿ.ಎಸ್.ಯಡಿಯೂರಪ್ಪ ಅವರು ಮಾಡಿದ ಭಾಷಣ ಅವರ ಪ್ರಬುದ್ಧತೆ ಮತ್ತು ಹೃದಯವಂತಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದರೆ ತಪ್ಪಿಲ್ಲ.

ಕರ್ನಾಟಕದ ರಾಜಕಾರಣದಲ್ಲಿ ಉತ್ತಮ ಪರಂಪರೆಯನ್ನು ಬೆಳೆಸಿದ ಅನೇಕ ನಾಯಕರಿದ್ದಾರೆ. ಅದರಲ್ಲೂ ಮುಖ್ಯಮಂತ್ರಿಯಾಗಿದ್ದವರು ತಮ್ಮ ನಂತರದ ಮುಖ್ಯಮಂತ್ರಿಗಳಿಗೆ ಗಡಿಯಾರ ತೊಡಿಸುವ ಪರಂಪರೆ ಡಿ.ದೇವರಾಜ ಅರಸು ಅವರ ತನಕ ಮುಂದುವರಿದುಕೊಂಡು ಬಂದಿತ್ತು. ಇನ್ನು ಮುಖ್ಯಮಂತ್ರಿಗಳಾದವರು ಎಂದೂ ವಿರೋಧ ಪಕ್ಷದ ನಾಯಕರನ್ನು ಶತ್ರುವೆಂದು ಭಾವಿಸುತ್ತಿರಲಿಲ್ಲ. ಎಸ್. ನಿಜಲಿಂಗಪ್ಪ, ವೀರೇಂದ್ರ ಪಾಟೀಲ್ ಡಿ.ದೇವರಾಜ ಅರಸು, ಆರ್. ಗುಂಡೂರಾವ್, ರಾಮಕೃಷ್ಣ ಹೆಗಡೆ, ವೀರಪ್ಪ ಮೊಯಿಲಿ, ದೇವೇಗೌಡ, ಜೆ.ಹೆಚ್.ಪಟೇಲ್, ಎಸ್.ಎಂ. ಕೃಷ್ಣ, ಧರ್ಮಸಿಂಗ್– ಹೀಗೆ ಕರ್ನಾಟಕವನ್ನಾಳಿದ ಮುಖ್ಯಮಂತ್ರಿಗಳು ತಮ್ಮ ಅವಧಿಯಲ್ಲಿದ್ದ ವಿರೋಧ ಪಕ್ಷದ ನಾಯಕರನ್ನು ರಾಜಕೀಯವಾಗಿ ಮುಗಿಸಲು ಪ್ರಯತ್ನ ಮಾಡುತ್ತಿರಲಿಲ್ಲ. ಅವರೊಡನೆ ಸುಮಧುರ ಬಾಂಧವ್ಯವನ್ನಿಟ್ಟುಕೊಂಡಿದ್ದರು. ಇಷ್ಟಾದರೂ ಅವರುಗಳು ಸದನದೊಳಗೆ ಪರಸ್ಪರ ಕೂಗಾಡಿ, ಕಿರುಚಾಡಿ, ರಂಪಾಟ ಮಾಡುತ್ತಿದ್ದರು. ಊಟದ ಹೊತ್ತಿಗೆ ಪರಸ್ಪರ ಮಾತನಾಡುತ್ತಾ ನಗುತ್ತಾ ಹರಟೆ ಹೊಡೆಯುತ್ತಾ ಊಟ ಮಾಡುತ್ತಿದ್ದರು. ಇಂತಹ ಅನೇಕ ಸನ್ನಿವೇಶಗಳನ್ನು ನಾನು ವಿಧಾನಪರಿಷತ್ತಿನ ಸದಸ್ಯನಾಗಿದ್ದಾಗ ಪ್ರತಿದಿನ ನೋಡಿದ್ದೇನೆ. ಪಕ್ಷದ ಸಿದ್ಧಾಂತ ಮತ್ತು ಕಾರ್ಯಕ್ರಮಗಳ ಅನುಷ್ಠಾನ ಇತ್ಯಾದಿ ವಿಚಾರಗಳಲ್ಲಿ ಮುಖ್ಯಮಂತ್ರಿಗಳಿಗೆ ಮತ್ತು ವಿರೋಧ ಪಕ್ಷದ ನಾಯಕರಿಗೆ ಅಭಿಪ್ರಾಯ ಭೇದವಿರುವುದು ಸಹಜ. ವಿರೋಧ ಪಕ್ಷದ ಪಾತ್ರವೇ ಸರ್ಕಾರವನ್ನು ತೂಗುಕತ್ತಿಯ ಮೇಲೆ ನಿಲ್ಲಿಸುವುದಾಗಿರುತ್ತದೆ. ವಿರೋಧ ಪಕ್ಷದ ಇಂತಹ ನಿಲುವಿನಿಂದ ಜನಸಾಮಾನ್ಯರಿಗೆ ಒಳ್ಳೆಯದಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಇದರ ಜೊತೆಗೆ ಮುಖ್ಯಮಂತ್ರಿ



**ಬಿ.ಎಸ್. ಯಡಿಯೂರಪ್ಪ ಅವರು ಬದುಕನ್ನು ರೂಪಿಸಿಕೊಳ್ಳಲು ಸರ್ಕಾರಿ ವೃತ್ತಿಗೆ ರಾಜೀನಾಮೆ ನೀಡಿ ಶಿಕಾರಿಪುರಕ್ಕೆ ಹೋಗುತ್ತಾರೆ. ಯಡಿಯೂರಪ್ಪ ಅವರದು ಅಕ್ಷರಶಃ ಹೋರಾಟದ ಬದುಕು. ಅಮೆರಿಕದ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ಅವರ ಬದುಕನ್ನು ವಿಶ್ಲೇಷಿಸುವಾಗ 'ಗುಡಿಸಿಲಿನಿಂದ ಶ್ವೇತಭವನಕ್ಕೆ' ಎಂಬ ಮಾತನ್ನು ಬಳಸುತ್ತಾರೆ. ಆ ಮಾತು ಯಡಿಯೂರಪ್ಪ ಅವರ ಬದುಕಿಗೂ ಅನ್ವಯವಾಗುತ್ತದೆ.**

ಮತ್ತು ವಿರೋಧ ಪಕ್ಷದ ನಾಯಕರಲ್ಲಿ ಪರಸ್ಪರ ಗೌರವ, ಪ್ರೀತಿ ಹಾಗೂ ವಿಶ್ವಾಸಗಳಿದ್ದರೆ ಅದರಲ್ಲಿ ತಪ್ಪೇನೂ ಇಲ್ಲ. ಅದು ನೈಜ ಪ್ರಜಾಪ್ರಭುತ್ವದ ಲಕ್ಷಣವೂ ಹೌದು!

ಮೊನ್ನೆ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ವಿದಾಯ ಭಾಷಣದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯ ಅವರನ್ನು ಪ್ರಶಂಸಿದ್ದಾರೆ. ಅವರು ಸದನಕ್ಕೆ ಬರುವ ಮುನ್ನ ಮಾಡಿಕೊಳ್ಳುವ ಸಿದ್ಧತೆಯನ್ನು ಶ್ರೀ ಯಡಿಯೂರಪ್ಪ ತಮ್ಮ ಭಾಷಣದಲ್ಲಿ ಗುರುತಿಸಿದ್ದಾರೆ. 'ಗುಣಕ್ಕೆ ಮತ್ಸರ ಉಂಟೇ' ಎಂಬ ಗಾದೆ ಮಾತಿನಂತೆ ಯಡಿಯೂರಪ್ಪ ಅವರು ಹೇಳಿದ್ದಾರೆ. ಅದಕ್ಕೆ ಮುನ್ನಾದಿನ ಯಡಿಯೂರಪ್ಪ ಅವರು ಕರ್ನಾಟಕ ರಾಜಕಾರಣದ ಭೀಷ್ಮರೆಂದೇ ಖ್ಯಾತರಾಗಿರುವ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ರಾಜ್ಯಕ್ಕೆ ಕೊಟ್ಟ ಕೊಡುಗೆಗಳನ್ನು ಸ್ಮರಿಸಿದ್ದಾರೆ. ಇಂದಿನ ಕಲುಷಿತ ಮತ್ತು ವ್ಯಕ್ತಿ ಪ್ರತಿಷ್ಠಿತ ರಾಜಕಾರಣದ ಸಂದರ್ಭದಲ್ಲಿ ಯಡಿಯೂರಪ್ಪ ಅವರ ಭಾಷಣ ಮರಳುಗಾಡಿನಲ್ಲಿ ಸಿಹಿ ನೀರಿನ ಬುಗ್ಗೆ ಕಂಡಂತಾಗಿದೆ. ನನ್ನಂತಹ ಲಕ್ಷಾಂತರ ಜನರು ಮನಸ್ಸಿನಲ್ಲೇ ಯಡಿಯೂರಪ್ಪ ಅವರನ್ನು ಅಭಿನಂದಿಸಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಸದನದಲ್ಲಿ ಆಡಿದ ಮಾತುಗಳು ಕೃತಕತೆಯಿಂದ ಕೂಡಿರಲಿಲ್ಲ. ಅವು ಅಂತರಾಳದ ಮಾತುಗಳು. ಅವರ ಪ್ರೀತಿ, ವಿಶ್ವಾಸ ಮತ್ತು ಅಭಿಮಾನಗಳನ್ನು ಸವಿದಿರುವ ಸಾವಿರಾರು ಮಿತ್ರರು ನನ್ನ ಮಾತನ್ನು ಅನುಮೋದಿಸುತ್ತಾರೆ. ನಾನು ಸಹ ಅವರ ಪ್ರೀತಿ–ವಿಶ್ವಾಸಗಳಿಗೆ ಪಾತ್ರನಾಗುವ ಅನೇಕ ಸನ್ನಿವೇಶಗಳು ದೊರಕಿದ್ದವು.

ಶ್ರೀ ಯಡಿಯೂರಪ್ಪ ಅವರನ್ನು ದೂರದಿಂದ ಅನೇಕ ವರ್ಷಗಳಿಂದ ನೋಡುತ್ತಾ ಬಂದಿದ್ದೇನೆ. 1983ರಲ್ಲಿ ಅಂದಿನ ಸಚಿವರಾಗಿದ್ದ ಕಾಂಗ್ರೆಸ್‌ನ ವೆಂಕಟಪ್ಪ ಅವರನ್ನು ಸೋಲಿಸಿ ಬಿಜೆಪಿ ಪಕ್ಷದ ಶಾಸಕರಾಗಿ ಕರ್ನಾಟಕ ವಿಧಾನಸಭೆ ಪ್ರವೇಶಿಸಿದರು. ಅವರು ರೈತರ ಸಮಸ್ಯೆಗಳಿಗೆ ಹೋರಾಡುವ ನಾಯಕರೆಂದೇ ಆ ದಿನಗಳಲ್ಲಿ ಖ್ಯಾತರಾಗಿದ್ದರು. 'ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುತ್ತದೆ' ಎನ್ನುವ ಮಾತು ಅವರ ಅಭಿಮಾನಿವಲಯದಲ್ಲಿ ಸಾಕಷ್ಟು ಪ್ರಸಿದ್ಧವಾಗಿತ್ತು.

ಬಿ.ಎಸ್. ಯಡಿಯೂರಪ್ಪ ಅವರು ಬಗರ್‌ಹುಕುಂನಲ್ಲಿ ಸಾಗುವಳಿ ಮಾಡುವವರಿಗೆ ಹಕ್ಕುಪತ್ರ ಕೊಡಿಸುವ ಬೃಹತ್ ಆಂದೋಲನವನ್ನು ಕೈಗೊಂಡರು. ಈ ವಿಚಾರವನ್ನು ರಾಜ್ಯದ ಮುನ್ನೆಲೆಗೆ ತಂದ ಕೀರ್ತಿ ಯಡಿಯೂರಪ್ಪನವರಿಗೆ ಸೇರುತ್ತದೆ. ಇದರಿಂದಾಗಿ ಯಡಿಯೂರಪ್ಪ ರೈತಪರ ಹೋರಾಟಗಾರರು ಎಂದು ರಾಜ್ಯದಲ್ಲಿ ಪ್ರಸಿದ್ಧರಾದರು. ಬಸವಕಲ್ಯಾಣದಿಂದ ಚಾಮರಾಜನಗರದ ತನಕ ಪಾದಯಾತ್ರೆ ನಡೆಸಿದ ಕೀರ್ತಿ ಯಡಿಯೂರಪ್ಪ ಅವರದು. ಇದರಿಂದಾಗಿ ಬಿಜೆಪಿ ಪಕ್ಷದ ಬೇರುಗಳು ಗ್ರಾಮೀಣ ಭಾಗಕ್ಕೆ ವಿಸ್ತರಿಸಲು ಸಹಾಯವಾಯಿತು. ಪ್ರಾಯಶಃ ಯಡಿಯೂರಪ್ಪ ಅವರಷ್ಟು ರಾಜ್ಯವನ್ನು ಸುತ್ತಿದ ಮತ್ತೊಬ್ಬ ನಾಯಕರನ್ನು ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಕಾಣಲು ಸಾಧ್ಯವಿಲ್ಲ. ಬಿಜೆಪಿ ಆಗ ಈಗಿನಷ್ಟು ಬೆಳೆದಿರಲಿಲ್ಲ. 1988ರಲ್ಲಿ ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷರಾದ ಶ್ರೀಮಾನ್ ಯಡಿಯೂರಪ್ಪ ಅವರು ಬಸ್ಸು, ರೈಲು ಕೆಲವೊಮ್ಮೆ ಪಾದಯಾತ್ರೆಯ ಮೂಲಕ ಸಂಚರಿಸುತ್ತಾ ಕರ್ನಾಟಕದ ಜನತೆಯ ಮನದಲ್ಲಿ ಬಿಜೆಪಿ ಪಕ್ಷವನ್ನು ಮೂಡಿಸಿದ್ದರು.

1970ರಲ್ಲಿ ಶಿಕಾರಿಪುರದ ಆರ್‌ಎಸ್‌ಎಸ್‌ನ ಕಾರ್ಯನಿರ್ವಾಹಕರಾಗಿ ನೇಮಕವಾದ ಯಡಿಯೂರಪ್ಪ ಅವರು ನಂತರ ತಮ್ಮ ಬದುಕನ್ನು ಸಾರ್ವಜನಿಕ ಕ್ಷೇತ್ರಕ್ಕೆ ಮುಡಿಪಿಟ್ಟರು. 1972ರಲ್ಲಿ ಶಿಕಾರಿಪುರದ ಪುರಸಭೆಗೆ ಆಯ್ಕೆಯಾದ ಯಡಿಯೂರಪ್ಪ ಅವರು ತುರ್ತುಪರಿಸ್ಥಿತಿ ವಿರೋಧಿಸಿ ಸೆರೆವಾಸ ಅನುಭವಿಸಿದ್ದಾರೆ. 1983ರಲ್ಲಿ ಆರ್. ಗುಂಡೂರಾವ್ ಅವರ ಸಚಿವ ಸಂಪುಟದಲ್ಲಿ ಸಚಿವರಾಗಿದ್ದ ವೆಂಕಟಪ್ಪ ಅವರನ್ನು ಸೋಲಿಸಿ ವಿಧಾನಸಭೆ ಪ್ರವೇಶಿಸಿದ ಯಡಿಯೂರಪ್ಪ ಅವರು ಆನಂತರ ಹಿಂದಿರುಗಿ ನೋಡಲಿಲ್ಲ. ವಿಧಾನಸಭೆಯಲ್ಲಿ ಬಿಜೆಪಿ ಪಕ್ಷದಿಂದ ಕೇವಲ ನಾಲ್ಕು ಜನ ಸದಸ್ಯರಿದ್ದಾಗಲೂ ಅಧಿಕಾರದ ಕಡೆ ವಾಲಿದವರಲ್ಲ. 1994ರಲ್ಲಿ ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಮೇಲೆ ಅವರು ಹೆಚ್ಚು ಕ್ರಿಯಾಶೀಲರಾದರು. 1999ರ ವಿಧಾನಸಭಾ ಚುನಾವಣೆಯಲ್ಲಿ ಅವರು ಸೋತರೂ ಅವರ ಪಕ್ಷ ಅವರನ್ನು ವಿಧಾನಪರಿಷತ್ತಿನ ಸದಸ್ಯರನ್ನಾಗಿಸಿತು.

2004ರಲ್ಲಿ ಬಿಜೆಪಿಗೆ ಅತಿಹೆಚ್ಚು ವಿಧಾನಸಭಾ ಸ್ಥಾನಗಳು ಬರಲು ಯಡಿಯೂರಪ್ಪ ಅವರ ಪಾತ್ರವೂ ಇತ್ತು. 2006ರಲ್ಲಿ ಜೆಡಿಎಸ್ ಮತ್ತು ಬಿಜೆಪಿ ಸಮ್ಮಿಶ್ರ ಸರ್ಕಾರ ರಚಿಸಿದಾಗ ಯಡಿಯೂರಪ್ಪ ಅವರು ಉಪಮುಖ್ಯಮಂತ್ರಿಗಳಾದರು. ಪಕ್ಷಕ್ಕಾಗಿ ಎಂತಹುದೇ ತ್ಯಾಗ ಮಾಡಲು ತಾವು ಸಿದ್ಧರೆಂಬುದನ್ನು ಆಗ ಯಡಿಯೂರಪ್ಪ ಅವರು ತೋರಿಸಿಕೊಟ್ಟರು.

2008ರಲ್ಲಿ ಬಿಜೆಪಿ ಅಧಿಕಾರ ಹಿಡಿಯಿತು. ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಾದರು. ಇದೊಂದು ಐತಿಹಾಸಿಕ ಘಳಿಗೆ. ಎಲ್ಲರಿಗೂ ಸಿಗುವಂತಹುದಲ್ಲ. ತಮ್ಮ ಶ್ರಮದ ಫಲವನ್ನು ತಾವೇ ಅನುಭವಿಸುವ ಅವಕಾಶ ಯಡಿಯೂರಪ್ಪ ಅವರಿಗೆ ದೊರಕಿತು.

ಶ್ರೀ ಯಡಿಯೂರಪ್ಪ ಅವರ 53 ವರ್ಷಗಳ ಸುದೀರ್ಘ ರಾಜಕೀಯ ಬದುಕಿನಲ್ಲಿ ಅವರು ಸಿಹಿ–ಕಹಿಗಳೆರಡನ್ನೂ ಸಾಕಷ್ಟು ಉಂಡಿದ್ದಾರೆ. ಸ್ವತಃ ಭಾವನಾಜೀವಿಯಾದ ಯಡಿಯೂರಪ್ಪ ಅವರು ಕಲ್ಪವೃಕ್ಷವಿದ್ದಂತೆ! ಮೇಲ್ನೋಟಕ್ಕೆ ತುಂಬಾ ಗಡಸು ಎನ್ನುವಂತೆ ಕಾಣುತ್ತಾರೆ. ಪ್ರಯತ್ನ ಮಾಡಿ ಒಳಹೊಕ್ಕರೆ ಅಲ್ಲಿ ತಿಳಿಯಾದ ಎಳನೀರು ಮತ್ತು ಸವಿಯಾದ ಕಾಯಿಯ ಫಲ ದೊರೆಯುತ್ತದೆ.

ಉಪಮುಖ್ಯಮಂತ್ರಿ ಮತ್ತು ಮುಖ್ಯಮಂತ್ರಿಯಾಗಿ ಮಾನ್ಯ ಯಡಿಯೂರಪ್ಪ ಅವರು ತಂದ ಕೆಲವು ಕಾರ್ಯಕ್ರಮಗಳ ಮೂಲಕ ಅವರ ವ್ಯಕ್ತಿತ್ವವನ್ನು ತಿಳಿಯಬಹುದು. ಬಡ ಕುಟುಂಬದಲ್ಲಿ ಜನಿಸಿದ ಹೆಣ್ಣು ಮಗುವಿಗೆ ಒಂದು ಲಕ್ಷ ರೂಪಾಯಿಯ 'ಭಾಗ್ಯಲಕ್ಷ್ಮಿ ಬಾಂಡ್' ವಿತರಣೆ. ಆ ಕಾಲದಲ್ಲಿ ಇದೊಂದು ಕ್ರಾಂತಿಕಾರಕ ಕಾರ್ಯಕ್ರಮವಾಗಿತ್ತು. ಅದೇ ಶಾಲಾ ಮಕ್ಕಳಿಗೆ ಉಚಿತ ಬೈಸಿಕಲ್ ನೀಡಿಕೆ, ಹಿರಿಯ ನಾಗರಿಕರಿಗೆ ಪ್ರತಿತಿಂಗಳು ಒಂದು ಸಾವಿರ ರೂಪಾಯಿ ಪಿಂಚಣಿ ನೀಡುವ 'ಸಂಧ್ಯಾ ಸುರಕ್ಷಾ' ಯೋಜನೆ. ಪುಟ್ಟ ಹೆಣ್ಣು ಮಕ್ಕಳು ಮತ್ತು ಹಿರಿಯ ನಾಗರಿಕರನ್ನು ಅಧಿಕಾರಸ್ಥಾನದಲ್ಲಿದ್ದವರು  ಏಕೆ ಸ್ಮರಿಸುತ್ತಾರೆ, ಹೇಳಿ. ಅವರು ಓಟು ಬ್ಯಾಂಕ್ ಆಗುವುದಿಲ್ಲ. ಮಾನವೀಯತೆಯುಳ್ಳ ವ್ಯಕ್ತಿಗಳ ಕಣ್ಣಿಗೆ ಮಾತ್ರ ಇಂತಹವರು ಬೀಳುತ್ತಾರೆ. ಒಂದು ಲಕ್ಷ ರೂಪಾಯಿವರಗಿನ ನೇಕಾರಸಾಲವನ್ನು ಮನ್ನಾ ಮಾಡಲಾಯಿತು. ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 3ಲಕ್ಷ ರೂಪಾಯಿಗಳ ಸಾಲ ಕೊಡಲು ತೀರ್ಮಾನವಾಯಿತು. ವಿದ್ಯಾದಾನ ಮಾಡುತ್ತಿರುವ ಧಾರ್ಮಿಕ ಪೀಠಗಳಿಗೆ ಉದಾರವಾಗಿ ಧನಸಹಾಯ ನೀಡಲಾಯಿತು. ಪರಿಶಿಷ್ಟ ಜಾತಿಯಲ್ಲಿದ್ದ ಲಂಬಾಣಿ, ಬೋವಿ ಸಮುದಾಯಗಳಿಗೆ ಅಭಿವೃದ್ಧಿಯಲ್ಲಿ ಸೂಕ್ತ ಪಾಲನ್ನು ಕೊಡಲಾಯಿತು.

ಶಿವಮೊಗ್ಗ ಮತ್ತು ಶಿಕಾರಿಪುರಗಳಿಗೆ ಯಡಿಯೂರಪ್ಪ ಅವರು ವಿಶೇಷವಾದ ಕೊಡುಗೆ ನೀಡಿದ್ದಾರೆ. ಶಿಕಾರಿಪುರ ಅವರ ವಿಧಾನಸಭಾ ಕ್ಷೇತ್ರ. ಶಿವಮೊಗ್ಗಕ್ಕೆ ವಿಮಾನ ನಿಲ್ದಾಣ ಬಂದಿದೆ. ಪಶುವೈದ್ಯಕೀಯ ಕಾಲೇಜು, ಹೊಸ ವಿಶ್ವವಿದ್ಯಾನಿಲಯಗಳು, ಕ್ಯಾನ್ಸರ್ ಆಸ್ಪತ್ರೆ, ಅಡಿಕೆ ಬೆಳೆಗಾರರಿಗೆ ವಿಶೇಷ ಸೌಲಭ್ಯ, ಸ್ಮಾರ್ಟ್‌ಸಿಟಿ ಯೋಜನೆಗಳು– ಹೀಗೆ ಒಂದೇ ಎರಡೇ.



**ಮಾಜಿ ಶಾಸಕರಾದ ಸುರೇಶ್‌ಗೌಡ ಅವರ ಜೊತೆ ಬಿ.ಎಸ್.ಯಡಿಯೂರಪ್ಪ ಹಾಗೂ ಡಾ.ಹುಲಿನಾಯ್ಕರ್.**

▶▶ 6ನೇ ಪುಟಕ್ಕೆ...

# ರಾಜಕೀಯ ಮತ್ತು ಸಾಮಾಜಿಕ ಸಮಾನತೆ ದೊರೆಯದಿದ್ದರೆ ಪ್ರಜಾಪ್ರಭುತ್ವಕ್ಕೆ ಅರ್ಥವೇನು?

**ಭಾರತದ ಅನೇಕ ನಾಯಕರು ತಮ್ಮ ಸಾಮಾಜಿಕ ಬದ್ಧತೆಯಿಂದ ತಮ್ಮ ಕಾಲದ ಸಮಾಜದ ಆಲೋಚನಾಕ್ರಮವನ್ನು ಬದಲಾಯಿಸಿದ್ದಾರೆ. ಅವರ ಕಾರ್ಯಗಳು ಆ ಹೊತ್ತಿಗೆ ಅವರ ಅಧಿಕಾರ ಸ್ಥಾನ ಉಳಿಸಿಕೊಳ್ಳುವುದಕ್ಕೆ ಮಾಡಿದ ತಂತ್ರವೆಂಬ ಟೀಕೆಗೊಳಗಾದರೂ ಅದರ ಗಾಢ ಪ್ರಭಾವ ಸಮಾಜ ಮೇಲಾಗಿರುವುದನ್ನು ಅಲ್ಲಗೆಳೆಯಲು ಸಾಧ್ಯವಿಲ್ಲ.**

◀◀ ...ಮೊದಲನೇ ಪುಟದಿಂದ

ಅವರಿಗೆ ಪಿತ್ರಾರ್ಜಿತವಾಗಿ ಯಾವುದೇ ಜಮೀನು, ಮನೆಗಳು ಬಂದಿರುವುದಿಲ್ಲ. ಅವರು ನಿರಂತರವಾಗಿ ಅಲೆದಾಡುತ್ತಾ ಜೀವನ ಮಾಡುತ್ತಾರೆ. ಅಂತಹವರಿಗೆ ಯಾವ ಸೌಲಭ್ಯ ಸಿಗಲು ಸಾಧ್ಯ. ಅವರ ಮಕ್ಕಳಿಗೂ ಶಿಕ್ಷಣ ದೊರೆಯುವುದಿಲ್ಲ. ಇವರಿಗೆ ಸರ್ಕಾರಿ ನೌಕರಿ ಸಿಗುವುದಾದರೂ ಹೇಗೆ?

ಭಾರತೀಯ ಸಮಾಜದಲ್ಲಿ 3000 ಜಾತಿಗಳಿವೆ. ಶೋಷಣೆ ಎಂಬುದು ಮೇಲ್ಜಾತಿಯಿಂದ ಮಾತ್ರ ನಡೆಯುವುದಿಲ್ಲ. ಭಾರತದ ಶ್ರೇಣೀಕೃತ ಸಮಾಜದಲ್ಲಿ ತಮಗಿಂತ ಕೆಳಗಿನವರನ್ನು ಎಲ್ಲಾ ಸಮುದಾಯದವರು ಒಂದಲ್ಲ ಒಂದು ರೀತಿ ಶೋಷಣೆ ಮಾಡುತ್ತಿರುತ್ತಾರೆ. ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ಸಮುದಾಯಗಳಲ್ಲಿ ಸ್ವಲ್ಪ ಮಟ್ಟಿಗೆ ಜಾಗೃತಿ ಪಡೆದುಕೊಂಡವರೇ ಎಲ್ಲಾ ಸೌಲಭ್ಯಗಳನ್ನು ಮತ್ತೆಮತ್ತೇ ಪಡೆದುಕೊಳ್ಳುತ್ತಾರೆ. ಅವರು ತಮ್ಮ ಜೊತೆಗಿರುವವರ ಬಗ್ಗೆ ವಿಚಾರದಲ್ಲಿ ಯೋಚಿಸುವುದಿಲ್ಲ. ತಮಗೆ ದೊರೆತ ಸವಲತ್ತುಗಳನ್ನು ಹಂಚಿಕೊಳ್ಳಲು ಮುಂದಾಗುವುದಿಲ್ಲ. ಅದಕ್ಕಾಗಿ ಒಳಮೀಸಲಾತಿ ಅನುಷ್ಠಾನವಾಗಬೇಕು ಎಂಬ ಕೂಗಿದೆ.

ಇಂತಹ ಅಸಮಾನತೆ ನಿವಾರಣೆ ಕೇವಲ ಕಾನೂನಿನಿಂದ ಆಗುವ ಕೆಲಸವಲ್ಲ. ಅದಕ್ಕೆ ರಾಜಕೀಯ ಪಕ್ಷ ಮತ್ತು ಅದರ ನಾಯಕರಿಗೆ ವಿಶೇಷವಾದ ಬದ್ಧತೆ ಬೇಕಾಗುತ್ತದೆ. ಇನ್ನು ಹಿಂದುಳಿದ ಮತ್ತು ಪರಿಶಿಷ್ಟ ಜಾತಿಯ ಸಮುದಾಯದ ನಾಯಕರಿಗೆ 'ಟ್ರಸ್ಟಿಷಿಪ್' (Trustee Ship) ಅಂದರೆ 'ಧರ್ಮದರ್ಶಿತ್ವ' ಬೇಕಾಗಿರುತ್ತದೆ. ತಾನು ಮತ್ತು ತಮ್ಮ ಸಮುದಾಯ ಪಡೆದ ಸೌಲಭ್ಯವನ್ನು ತನ್ನ ಜೊತೆಯಿರುವ ಸೋದರಸಮಾಜಗಳಿಗೂ ಕೊಡಬೇಕು ಎಂಬ ಪ್ರಜ್ಞೆ ಅವರಲ್ಲಿ ಜಾಗೃತವಾಗಬೇಕು. ಇದೊಂದು ಸಕಾರಾತ್ಮಕ ಭಾವನೆ. ಸಂವಿಧಾನ ರೂಪಿಸಿದ ಡಾ. ಅಂಬೇಡ್ಕರ್ ಈ ವಿಚಾರವನ್ನು ಸ್ಪಷ್ಟವಾಗಿ ಹೇಳಿದ್ದಾರೆ.

ಭಾರತದ ಅನೇಕ ನಾಯಕರು ತಮ್ಮ ಸಾಮಾಜಿಕ ಬದ್ಧತೆಯಿಂದ ತಮ್ಮ ಕಾಲದ ಸಮಾಜದ ಆಲೋಚನಾಕ್ರಮವನ್ನು ಬದಲಾಯಿಸಿದ್ದಾರೆ. ಅವರ ಕಾರ್ಯಗಳು ಆ ಹೊತ್ತಿಗೆ ಅವರ ಅಧಿಕಾರ ಸ್ಥಾನ ಉಳಿಸಿಕೊಳ್ಳುವುದಕ್ಕೆ ಮಾಡಿದ ತಂತ್ರವೆಂಬ ಟೀಕೆಗೊಳಗಾದರೂ ಅದರ ಗಾಢ ಪ್ರಭಾವ ಸಮಾಜ ಮೇಲಾಗಿರುವುದನ್ನು ಅಲ್ಲಗೆಳೆಯಲು ಸಾಧ್ಯವಿಲ್ಲ.

1970ರ ಭಾರತದ ರಾಜಕಾರಣದಲ್ಲಿ ಶ್ರೀಮತಿ ಇಂದಿರಾ ಗಾಂಧಿ ಏಕೈಕ ಶಕ್ತಿಯಾಗಿ ಹೊರ ಹೊಮ್ಮಿದ್ದರು. ಅವರು ಅನೇಕ ನೂತನ ನಾಯಕರನ್ನು ಬೆಳಕಿಗೆ ತಂದರು. ಈ ಕಾರ್ಯವನ್ನು ದೇಶದಾದ್ಯಂತ ಮಾಡಿದ್ದಾರೆ. ಅವರಲ್ಲಿ ಕರ್ನಾಟಕದಲ್ಲಿ ಶ್ರೀಮತಿ ಇಂದಿರಾ ಗಾಂಧಿ ಗುರುತಿಸಿದ ನಾಯಕರಲ್ಲಿ ಡಿ.ದೇವರಾಜ ಅರಸು ಪ್ರಮುಖರು. ಭಾರತದ ಬೇರೆ ಕಡೆ ಶ್ರೀಮತಿ ಇಂದಿರಾ ಗಾಂಧಿ ಗುರುತಿಸಿದ ನಾಯಕರು ಏನೂ ಮಾಡಿದರೋ ಗೊತ್ತಿಲ್ಲ. ಕರ್ನಾಟಕದಲ್ಲಿ ಶ್ರೀದೇವರಾಜ ಅರಸು ಅವರು ಮಾಡಿದ ಪ್ರಯೋಗ ಅದರಿಂದ ಸಿದ್ಧಿಸಿದ ಫಲ ನಮ್ಮ ಕಣ್ಮುಂದಿದೆ.

1972ರಲ್ಲಿ ನಡೆದ ಚುನಾವಣೆಯಲ್ಲಿ ದೇವರಾಜ ಅರಸು ಅವರು ಕ್ರಾಂತಿಕಾರಕ ಬದಲಾವಣೆಯನ್ನು ತಂದರು. ಆ ತನಕ ಸಾಂಪ್ರದಾಯಿಕವಾಗಿ ಇದ್ದ, ಇಂತಹ ಸಮುದಾಯಕ್ಕೆ ಈ ಕ್ಷೇತ್ರವೆಂಬ ರೂಢಿಗತ ಅಭಿಪ್ರಾಯವನ್ನು ಬದಲಾವಣೆ ಮಾಡಿ ವಿಧಾನಸಭೆಗೆ ಹೋಗುವ ಕನಸನ್ನು ಎಂದೂ ಕಾಣದ ಸಮುದಾಯಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟು ಅವರ ಆಯ್ಕೆಯಾಗುವಂತೆ ಮಾಡಿ ಅಂತಹವರನ್ನು ಸಚಿವರನ್ನಾಗಿ ಮಾಡಿದ ಕೀರ್ತಿ ದೇವರಾಜ ಅರಸು ಅವರಿಗೆ ಸಂದಾಯವಾಗಿದೆ. ಇಡೀ ಸಮಾಜದ ಚಿಂತನಾಕ್ರಮವನ್ನೇ ಮುಖ್ಯಮಂತ್ರಿಯಾಗಿ ದೇವರಾಜ ಅರಸು ಅವರು ಬದಲಾವಣೆ ಮಾಡಿದರು. ಇದನ್ನು ಮುಂದೆ ಬಂದ ರಾಮಕೃಷ್ಣ ಹೆಗಡೆ ಸಹ ಮುಂದುವರಿಸಿದರು. ತಿಪಟೂರು ವಿಧಾನಸಭಾ ಕ್ಷೇತ್ರದಲ್ಲಿ ಸಣ್ಣ ಸಮುದಾಯಕ್ಕೆ ಟಿಕೇಟ್ ನೀಡಿ ಗೆಲುವು ಸಾಧಿಸಿದ ಕೀರ್ತಿ ರಾಮಕೃಷ್ಣ ಹೆಗಡೆ ಅವರಿಗೆ ಸೇರುತ್ತದೆ. ಮಂಡ್ಯಜಿಲ್ಲೆಯ ಉಸ್ತುವಾರಿ ಸಚಿವರಾಗಿ ಪರಿಶಿಷ್ಟ ಜಾತಿಗೆ ಟಿಕೆಟ್ ನೀಡಿದ ಕೀರ್ತಿಯೂ ಶ್ರೀ ರಾಮಕೃಷ್ಣ ಹೆಗಡೆ ಅವರಿಗೆ ಸಲ್ಲುತ್ತದೆ. ಅದೇ ರೀತಿ 1996ರಲ್ಲಿ ಮುಖ್ಯಮಂತ್ರಿಯಾಗಿದ್ದ ಮಾನ್ಯ ದೇವೇಗೌಡ ಅವರು ಅತ್ಯಂತ ಹಿಂದುಳಿದ ಸಮುದಾಯಗಳಿಗೆ ಲೋಕಸಭೆಗೆ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟಿದ್ದರು. ಆ ಕಾರಣಕ್ಕಾಗಿ ಜನತಾದಳಕ್ಕೆ ಅತಿಹೆಚ್ಚು ಲೋಕಸಭಾ ಸ್ಥಾನಗಳು ಲಭ್ಯವಾಗಿದ್ದವು. ದೇವರಾಜ ಅರಸು, ರಾಮಕೃಷ್ಣ ಹೆಗಡೆ ಮತ್ತು ದೇವೇಗೌಡ ಅವರುಗಳು ತಮಗೆ ದೊರೆತಿದ್ದ ಜನಪ್ರಿಯತೆಯನ್ನು ಸಣ್ಣ ಸಮುದಾಯಗಳ ರಾಜಕೀಯ ಏಳಿಗೆಗೆ ಬಳಸಿದ್ದು ದಾಖಲಾರ್ಹ ವಿಚಾರವೆಂದು ನನ್ನ ಅಭಿಪ್ರಾಯವಾಗಿದೆ.

ಇಂದು ಭಾರತೀಯ ಜನತಾಪಕ್ಷಕ್ಕೆ ಇತಿಹಾಸ ಸೃಷ್ಟಿಸುವ ಅವಕಾಶ ಲಭಿಸಿದೆ. ಇಡೀ ದೇಶ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ ನಾಯಕತ್ವವನ್ನು ಮನಸಾರೆ ಒಪ್ಪಿಕೊಂಡಿದೆ. ಪ್ರಧಾನಿ ಅವರು ತಂದ ಎಲ್ಲಾ ಕಾರ್ಯಕ್ರಮಗಳು ಕೆಳಹಂತವನ್ನು ತಲುಪಿ ಅವರಿಗೆ ಇಂತಹ ಅಪೂರ್ವ ಬೆಂಬಲ ದೊರೆಯುವಂತಾಗಿದೆ ಎಂಬುದು ಮತ್ತೊಂದು ಸಕಾರಾತ್ಮಕ ಅಂಶವಾಗಿದೆ. ಪ್ರಧಾನಮಂತ್ರಿಗಳು ಶೋಷಿತ ಸಮಾಜಕ್ಕೆ ಅನೇಕ ಕೊಡುಗೆಗಳನ್ನು ನೀಡಿರುವುದು ಎಲ್ಲರಿಗೂ ತಿಳಿದ ವಿಚಾರ. ಇಂತಹ ಸನ್ನಿವೇಶವನ್ನು ಎಚ್ಚರಿಕೆಯಿಂದ ಬಿಜೆಪಿ ಪಕ್ಷ ಬಳಸಿಕೊಳ್ಳಬೇಕಾಗಿದೆ.

ಈ ತನಕ ಯಾವುದೇ ರಾಜಕೀಯ ಅಧಿಕಾರ ದೊರೆಯದ ಸಮಾಜ ಮತ್ತು ವ್ಯಕ್ತಿಗಳನ್ನು ಗುರುತಿಸಿ ಅವರಿಗೆ ಸೂಕ್ತ ಅವಕಾಶ ಕೊಡಬೇಕಾಗಿದೆ. ಒಂದು ಪಕ್ಷ ಬಿಜೆಪಿ ಹಾಗೇ ಗುರುತಿಸಿದರೆ ಅದನ್ನು ಬಹುಸಂಖ್ಯಾತರು ಖಂಡಿತ ಬೆಂಬಲಿಸುತ್ತಾರೆ. ಇತಿಹಾಸ ಬರೆಯುವ ಅವಕಾಶ ರಾಜಕೀಯಪಕ್ಷವೊಂದಕ್ಕೆ ದೊರೆತಂತಾಗುತ್ತದೆ. ಹೀಗಾದಾಗ ನಿಜವಾದ ಪ್ರಜಾಪ್ರಭುತ್ವದ ಆಶಯವಾದ ಸಮಾನತೆಯ ಸಮಾಜ ನಿರ್ಮಾಣದ ಕನಸು ನನಸಾಗುವ ಸಂಭವವಿರುತ್ತದೆ.

# ಇತಿಹಾಸ ಸೃಷ್ಟಿಸಿದ ಬಿ.ಎಸ್.ಯಡಿಯೂರಪ್ಪ

## ಡಾ.ಎಂ.ಆರ್.ಹುಲಿನಾಯ್ಕರ್

◀◀ ...5ನೇ ಪುಟದಿಂದ

ಕಳೆದ ಒಂದು ದಶಕದಲ್ಲಿ ಶಿವಮೊಗ್ಗ ಜಿಲ್ಲೆಯ ಚಿತ್ರಣವೇ ಬದಲಾಗಿ ಹೋಗಿದೆ.

1983ರಲ್ಲಿ ಶಿಕಾರಿಪುರ ಅತ್ಯಂತ ಹಿಂದುಳಿದ ವಿಧಾನಸಭಾ ಕ್ಷೇತ್ರವಾಗಿತ್ತು. ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹಾಗೂ ಹಿಂದುಳಿದವರು ಗಣನೀಯ ಸಂಖ್ಯೆಯಲ್ಲಿದ್ದರು. ಆದರೆ ಇಂದು ಶಿಕಾರಿಪುರ ಸರ್ವರೀತಿಯಲ್ಲೂ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳಲ್ಲಿ ಒಂದಾಗಿದೆ. ಇಡೀ ತಾಲ್ಲೂಕಿನ ರೂಪರೇಷೆಯನ್ನು ಬದಲಾಯಿಸಿದ ಕೀರ್ತಿ ಯಡಿಯೂರಪ್ಪ ಅವರಿಗೆ ಸೇರುತ್ತದೆ.

27 ಫೆಬ್ರುವರಿ 1943ರಂದು ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕಿನ ಬೂಕನಕೆರೆಯ ಸಿದ್ಧಲಿಂಗಪ್ಪ ಮತ್ತು ಪುಟ್ಟತಾಯಮ್ಮ ದಂಪತಿಗೆ ಜನಿಸಿದ ಬಿ.ಎಸ್. ಯಡಿಯೂರಪ್ಪ ಅವರು ಬದುಕನ್ನು ರೂಪಿಸಿಕೊಳ್ಳಲು ಸರ್ಕಾರಿ ವೃತ್ತಿಗೆ ರಾಜೀನಾಮೆ ನೀಡಿ ಶಿಕಾರಿಪುರಕ್ಕೆ ಹೋಗುತ್ತಾರೆ. ಯಡಿಯೂರಪ್ಪ ಅವರದು ಅಕ್ಷರಶಃ ಹೋರಾಟದ ಬದುಕು. ಅಮೆರಿಕದ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ಅವರ ಬದುಕನ್ನು ವಿಶ್ಲೇಷಿಸುವಾಗ 'ಗುಡಿಸಿಲಿನಿಂದ ಶ್ವೇತಭವನಕ್ಕೆ' ಎಂಬ ಮಾತನ್ನು ಬಳಸುತ್ತಾರೆ. ಆ ಮಾತು ಯಡಿಯೂರಪ್ಪ ಅವರ ಬದುಕಿಗೂ ಅನ್ವಯವಾಗುತ್ತದೆ. ಶಿಕಾರಿಪುರದಲ್ಲಿ ತಾವು ಮಾಡಿದ ಸಾಧನೆಯಿಂದಾಗಿ ಯಡಿಯೂರಪ್ಪ ಅವರು ಶಿಕಾರಿಪುರ ಕ್ಷೇತ್ರದಿಂದ ವಿಧಾನಸಭೆ ಪ್ರವೇಶಿಸಿ ಕೊನೆಗೆ ಮುಖ್ಯಮಂತ್ರಿಗಳೂ ಆದರು.

1967ರಲ್ಲಿ ಶಿಕಾರಿಪುರದ ವೀರಭದ್ರಶಾಸ್ತ್ರಿಗಳ ಮಗಳು ಮೈತ್ರಿದೇವಿಯನ್ನು ಮದುವೆಯಾದ ಯಡಿಯೂರಪ್ಪ ದಂಪತಿಗೆ ಐದು ಜನ ಮಕ್ಕಳಿದ್ದಾರೆ. ಇಬ್ಬರು ಗಂಡು ಮಕ್ಕಳು ಸಾರ್ವಜನಿಕ ಬದುಕಿನಲ್ಲಿದ್ದಾರೆ. ಮೂವರು ಹೆಣ್ಣು ಮಕ್ಕಳು ಮದುವೆಯಾಗಿ ಸುಖವಾಗಿದ್ದಾರೆ.

ಮಾನ್ಯ ಯಡಿಯೂರಪ್ಪ ಅವರ ಪ್ರೀತಿ–ವಿಶ್ವಾಸಗಳನ್ನು ಸವಿಯುವ ಅನೇಕ ಅವಕಾಶಗಳು ನನಗೆ ದೊರಕಿವೆ. ಅವರು ಕಷ್ಟದ ಕಾಲದಲ್ಲಿ ನಮ್ಮ ಸಂಸ್ಥೆಗೆ ಸಹಾಯ ಮಾಡಿದ್ದಾರೆ. ಅಂದಿನ ಆರೋಗ್ಯ ಸಚಿವರಾಗಿದ್ದ ಜೆ.ಪಿ. ನಡ್ಡಾ ಅವರ ಬಳಿ ಸ್ವತಃ ತಾವೇ ಕರೆದುಕೊಂಡು ಹೋಗಿದ್ದಾರೆ. ಯಡಿಯೂರಪ್ಪ ಅವರ ಸ್ವಭಾವವೆಂದರೆ, ಅವರಿಗೆ ಒಮ್ಮೆ ಒಂದು ಕೆಲಸದ ವಿಚಾರದಲ್ಲಿ ಮನವಿ ಸಲ್ಲಿಸಿದ ಮೇಲೆ ಮತ್ತೆ ಮತ್ತೆ ಜ್ಞಾಪಿಸುವ ಅಗತ್ಯವಿಲ್ಲ. ಅವರೇ ಸಂಬಂಧಪಟ್ಟವರಿಗೆ ಒಂದಲ್ಲ ಎರಡು ಸಲ ಹೇಳುತ್ತಾರೆ. ಕೆಲಸವಾದ ನಂತರ ಅದನ್ನು ನಮಗೆ ಖುದ್ದು ಫೋನ್ ಮಾಡಿ ತಿಳಿಸುತ್ತಾರೆ.

2016 ಇರಬಹುದು. ಬಿಜೆಪಿ ಪಕ್ಷದ ವತಿಯಿಂದ ಬರ ಅಧ್ಯಯನ ತಂಡವನ್ನು ಬಿ.ಎಸ್.ಯಡಿಯೂರಪ್ಪ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿತ್ತು. ಅದರಲ್ಲಿ ನಾನು ಸದಸ್ಯನಾಗಿದ್ದೆ. ಆ ತಂಡ ಗುಲ್ಬರ್ಗ ಪ್ರವಾಸ ಹೊರಟಿತು. ಗುಲ್ಬರ್ಗದಲ್ಲಿ ನಮಗೆ ಬೇರೆ ತಂಗಲು ವ್ಯವಸ್ಥೆ ಮಾಡಿದ್ದರು. ತಂಡದ ನಾಯಕರಾಗಿದ್ದ ಯಡಿಯೂರಪ್ಪ ಅವರು ಮತ್ತೊಂದು ಕಡೆಯಿದ್ದರು. ಬೆಳಗ್ಗೆ ಮತ್ತು ಸಂಜೆ ನಾವು ಸಂದರ್ಶನ ಮಾಡಿದಾಗೆಲ್ಲಾ 'ಹೇಗಿದೆ ವ್ಯವಸ್ಥೆ, ತೊಂದರೆಯಿದ್ದರೆ ಇಲ್ಲಿಗೇ ಬಂದುಬಿಡಿ' ಮೊದಲಾದ ಆತ್ಮೀಯತೆಯ ಮಾತುಗಳನ್ನು ಅವರಿಂದ ಕೇಳದ ದಿನಗಳಿರಲಿಲ್ಲ.

ತುಮಕೂರಿನ ನಮ್ಮ ಶ್ರೀದೇವಿ ಸಂಸ್ಥೆಯ ಆವರಣದಲ್ಲಿ ಪಕ್ಷದ ಸಭೆ ಅಥವಾ ಗೋಷ್ಠಿಗಳು ನಡೆದಾಗ ಮಾನ್ಯ ಯಡಿಯೂರಪ್ಪ ಅವರು ಬಂದು ಸಾಕಷ್ಟು ಸಮಯವನ್ನು ನಮ್ಮ ಬಳಿ ಕಳೆದಿದ್ದಾರೆ. ಅನೇಕ ಸಲ ಮನೆಗೂ ಬಂದು ಆತಿಥ್ಯ ಸ್ವೀಕರಿಸಿದ್ದಾರೆ. ಮನೆಗೆ ಬಂದಾಗ ಮಕ್ಕಳನ್ನು ಆತ್ಮೀಯವಾಗಿ ಮಾತನಾಡಿಸುತ್ತಾರೆ. ತಿಂಡಿ ಅಥವಾ ಭೋಜನ ಸ್ವೀಕರಿಸಿದ ನಂತರ ಹೋಗುವಾಗ ಮನೆಯೊಡತಿಗೆ ಧನ್ಯವಾದಗಳನ್ನು ಅರ್ಪಿಸುವುದನ್ನು ಮರೆಯುವುದಿಲ್ಲ.

ಯಾವುದೇ ವ್ಯಕ್ತಿ ತಾನೇರಿದ ಪದವಿ ಹಾಗೂ ಸ್ಥಾನಮಾನಗಳಿಂದ ದೊಡ್ಡವನಾಗುವುದಿಲ್ಲ. ತನ್ನ ನಡವಳಿಕೆ ಮತ್ತು ಮಾನವೀಯ ಗುಣಗಳಿಂದ ಆತ ದೊಡ್ಡವನಾಗುತ್ತಾನೆ. ಈ ದೃಷ್ಟಿಯಿಂದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಸಹಜವಾಗಿ ದೊಡ್ಡವರಾಗಿ ಮಾನವೀಯ ಗುಣಗಳ ಗಣಿಯಾಗಿ ಸದಾ ನೆನಪಿನಲ್ಲಿ ಉಳಿಯುತ್ತಾರೆ.

# ಸಹೃದಯಿ, ಉದ್ಯಮಿ ಎನ್.ಆರ್. ಜಗದೀಶ ಇನ್ನಿಲ್ಲ

◀◀ ...ಮೊದಲನೇ ಪುಟದಿಂದ

ಅನೇಕ ಶಿಕ್ಷಣಸಂಸ್ಥೆಗಳನ್ನು ಬೆಳೆಸುವಲ್ಲಿ ಅವರ ಕೊಡುಗೆಯಿದೆ. ಇಂದು ತುಮಕೂರಿನಲ್ಲಿರುವ ಚೇತನ ವಿದ್ಯಾಮಂದಿರ ಮತ್ತು ಸರ್ವೋದಯ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾಗಿ ಅದರ ಬೆಳವಣಿಗೆಗೆ ಸಹಾಯ ಮಾಡಿದ್ದಾರೆ.

ಉದ್ಯಮದಲ್ಲೂ ಅವರು ದಾಖಲೆಗೆ ಅರ್ಹವಾದ ಸಾಧನೆ ಮಾಡಿದ್ದಾರೆ. ಅಕ್ಕಿಯಿಂದ ಎಣ್ಣೆ ತೆಗೆಯುವ ಶ್ರೀ ಸಿದ್ಧಗಂಗಾ ಆಯಿಲ್ ಎಕ್ಸ್‌ಟ್ರಾಕ್ಷನ್ ಲಿ. ಕಂಪನಿಯನ್ನು ಸ್ಥಾಪಿಸಿ, ಅದರಲ್ಲಿನ ಅದ್ವಿತೀಯ ಸಾಧನೆಗಾಗಿ ನಾಲ್ಕು ಸಲ ರಾಷ್ಟ್ರಪ್ರಶಸ್ತಿ ಗಳಿಸಿದ್ದಾರೆ.

ಎನ್.ಆರ್. ಜಗದೀಶ್ ಅವರು ಶ್ರೀದೇವಿ ಕಾಲೇಜಿನ ಸಮಾರಂಭಗಳಿಗೂ ಮತ್ತು ಮನೆಯಲ್ಲಿ ನಡೆದ ಸಮಾರಂಭಗಳಿಗೂ ಆಗಮಿಸಿ ಹರಸಿದ್ದಾರೆ. ಅವರ ನಿಧನದಿಂದ ವೈಯಕ್ತಿಕವಾಗಿ ಮತ್ತು ಶ್ರೀದೇವಿ ಶಿಕ್ಷಣ ಸಂಸ್ಥೆಯ ಪರವಾಗಿ ಅವರ ಆತ್ಮಕ್ಕೆ ಶಾಂತಿ ಕೋರುತ್ತೇನೆ. ಅವರ ನೆನಪು ನನ್ನಲ್ಲಿ ಚಿರಕಾಲ ಉಳಿದಿರುತ್ತದೆ.

■ **ಡಾ. ಎಂ.ಆರ್. ಹುಲಿನಾಯ್ಕರ್**



ಡಾ. ಎಂ.ಆರ್. ಹುಲಿನಾಯ್ಕರ್ ದಂಪತಿ ಜೊತೆ ಎನ್.ಆರ್.ಜಗದೀಶ್

## ಶ್ರೀ ಶಂಭುಲಿಂಗೇಶ್ವರನ ಸಾನ್ನಿಧ್ಯದಲ್ಲಿ

# ಶಿವರಾತ್ರಿಯ ಜಾಗರಣೆ

■ ಡಾ. ರಮಣ ಎಂ ಹುಲಿನಾಯ್ಕರ್
ಕಾರ್ಯನಿರ್ವಾಹಕ ಸಂಪಾದಕರು
ನಿರ್ದೇಶಕರು, ಶ್ರೀದೇವಿ ವೈದ್ಯಕೀಯ ಕಾಲೇಜು



ಡಾ.ಲಾವಣ್ಯ, ಡಾ.ರಮಣ್ ಮತ್ತು ಮಕ್ಕಳ ಜೊತೆ ಬೆಳಗಾವಿ ಜಿಲ್ಲೆಯ ರಾಂಪುರದ ಭಜನಾ ತಂಡ.

2023ರ ಫೆಬ್ರುವರಿ 18ರಂದು ಅಂದರೆ ಮಾಘಮಾಸ ಕೃಷ್ಣಪಕ್ಷದ ಚತುರ್ದಶಿಯಂದು ತುಮಕೂರಿನ ಶ್ರೀದೇವಿ ವಿದ್ಯಾಸಂಸ್ಥೆಯ ಶ್ರೀ ದುರ್ಗಾಂಬಿಕಾ ದೇವಿಯ ಆಲಯದ ಆವರಣದಲ್ಲಿರುವ ಶ್ರೀ ಶಂಭುಲಿಂಗೇಶ್ವರಸ್ವಾಮಿ ಸಾನ್ನಿಧ್ಯದಲ್ಲಿ ಈ ಸಲದ ಶಿವರಾತ್ರಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಶಿವ ಎನ್ನುವುದೇ ಮಂಗಳಕರ. ಆತ ಸೃಷ್ಟಿಯ ಮೂಲಪುರುಷ. ಶಿವ ಪ್ರಳಯಕಾರನೆಂದು ಭಾರತೀಯರು ನಂಬಿದ್ದಾರೆ. ಕೆಟ್ಟದ್ದನ್ನು ನಾಶ ಮಾಡದಿದ್ದರೆ ಒಳ್ಳೆಯದು ಬೆಳೆಯಲು ಸಾಧ್ಯವಿಲ್ಲ. ಶಿವ ಸೃಷ್ಟಿಯ ಸಂಕೇತ. ಆತನನ್ನು 'ಆದಿಯೋಗಿ' 'ಆದಿಗುರು' ಎಂದೆಲ್ಲಾ ಕರೆಯುತ್ತಾರೆ. ಯೋಗಿ ಎಂದರೆ ಶರೀರ, ಮನಸ್ಸು ಮತ್ತು ಆತ್ಮಗಳ ಸಮನ್ವಯ ಸಾಧಿಸಿದವನು ಎಂದು ಕರೆಯುತ್ತೇವೆ. ಶಿವ ಎಲ್ಲಾ ತತ್ವಗಳ ಸಮನ್ವಯಕಾರ. ಶಿವರಾತ್ರಿ ಪ್ರತಿ ಹುಣ್ಣಿಮೆಯಂದು ಬರುತ್ತದೆ. ಮಹಾಶಿವರಾತ್ರಿ ಮಾತ್ರ ಫೆಬ್ರುವರಿ ಅಥವಾ ಮಾರ್ಚ್‌ನಲ್ಲಿ ಬರುತ್ತದೆ.



ಶಿವರಾತ್ರಿ ಭಕ್ತರ ಪಾಲಿಗೆ ಮಂಗಳಕರವಾದ ರಾತ್ರಿ. ಹಗಲು ಉಪವಾಸ. ರಾತ್ರಿ ಶಿವಧ್ಯಾನದೊಡನೆ ಜಾಗರಣೆ ಶಿವರಾತ್ರಿಯ ವೈಶಿಷ್ಟ್ಯ. ಶಿವಧ್ಯಾನ ಮಾಡಿ ಶಿವನ ಕೃಪೆಗೆ ಪಾತ್ರರಾಗಲು ಇದಕ್ಕಿಂತ ಉತ್ತಮ ದಿನ ಮತ್ತೊಂದಿಲ್ಲ. ಶಿವರಾತ್ರಿಯಂದು ಯಾರು ಶಿವನ ಧ್ಯಾನ, ಪೂಜೆಗಳಲ್ಲಿ ನಿರತರಾಗಿರುತ್ತಾರೋ ಅಂತಹವರು ಶಿವಕೃಪೆಗೆ ಪಾತ್ರರಾಗುತ್ತಾರೆ ಎಂಬುದು ಭಾರತೀಯರ ಪ್ರಬಲವಾದ ನಂಬಿಕೆ.

ಶಿವರಾತ್ರಿಯ ದಿನವೇ ಪರಶಿವನು ಪಾರ್ವತಿದೇವಿಯನ್ನು ವಿವಾಹವಾದನು ಎಂದು ಶಿವಪುರಾಣದಲ್ಲಿ ಹೇಳಲಾಗಿದೆ. ಈ ದಿನ ಶಿವನು ಭೂಮಿಗೆ ಬಂದು ಭಕ್ತರ ಕಷ್ಟಗಳನ್ನು ಪರಿಹರಿಸುತ್ತಾನೆ ಎಂದು ಕೆಲವು ಗ್ರಂಥಗಳು ಹೇಳುತ್ತವೆ.

ಉಪವಾಸ ಮತ್ತು ಜಾಗರಣೆ ಶಿವರಾತ್ರಿಯ ವಿಶೇಷತೆ. ಜಾಗರಣೆಯ ನಂತರ ಸೂರ್ಯೋದಯವಾದ ಮೇಲೆ ಶಿವಲಿಂಗಕ್ಕೆ ಅಭಿಷೇಕ ಮಾಡಿ ಪ್ರಾರ್ಥನೆ ಸಲ್ಲಿಸಿ ಶಿವರಾತ್ರಿಯ ವ್ರತವನ್ನು ಪೂರ್ಣಗೊಳಿಸಲಾಗುತ್ತದೆ.

ಶಿವನಿಗೆ 'ಬಿಲ್ವಪತ್ರೆ' ಅತ್ಯಂತ ಪ್ರಮುಖವಾದದ್ದು. ಬೇಡನೊಬ್ಬ ಒಮ್ಮೆ ದಾರಿ ತಪ್ಪಿಸಿಕೊಂಡು ಕಾಡಿನ ಮಧ್ಯೆ ಸಿಕ್ಕಿಹಾಕಿಕೊಳ್ಳುತ್ತಾನೆ. ಪ್ರಾಣಿಗಳಿಂದ ಆ ರಾತ್ರಿ ರಕ್ಷಣೆ ಪಡೆಯಲು ಅಲ್ಲಿದ್ದ ಬಿಲ್ವಪತ್ರೆ ಮರವನ್ನೇರಿ ನಿದ್ದೆ ತಡೆಯಲು ಬಿಲ್ವಪತ್ರೆಯನ್ನು ಒಂದೊಂದಾಗಿ ಕೆಳಗೆ ಎಸೆಯುತ್ತಾನೆ. ರಾತ್ರಿಯೆಲ್ಲಾ ಈ ಕಾರ್ಯವನ್ನು ಮಾಡುತ್ತಾ ಆತ ಎಚ್ಚರವಾಗಿರುತ್ತಾನೆ. ಅಂದು ಶಿವರಾತ್ರಿ. ಬಿಲ್ವ ಮರದ ಕೆಳಗಿದ್ದ ಶಿವಲಿಂಗಕ್ಕೆ ಆತ ಗೊತ್ತಿಲ್ಲದೇ ಪೂಜೆ ಮಾಡುತ್ತಾನೆ. ಅವನ ಭಕ್ತಿಗೆ ಮೆಚ್ಚಿ ಶಿವ ಅವನಿಗೆ ವರ ನೀಡುತ್ತಾನೆ. ಶಿವಪುರಾಣದಲ್ಲಿ ಬರುವ ಬೇಡರ ಕಣ್ಣಪ್ಪನ ಕತೆ ಎಲ್ಲರಿಗೂ ಚಿರಪರಿಚಿತ. ಶಿವನಿಗೆ ತನ್ನ ಕಣ್ಣನ್ನೇ ಕೊಟ್ಟ ಮಹಾಭಕ್ತ ಕಣ್ಣಪ್ಪ.

ಶಿವನು ಸರಳತೆ, ಪ್ರಾಮಾಣಿಕತೆ ಹಾಗೂ ನಿಷ್ಕಲ್ಮಶತೆಯ ಮನಸ್ಸಿನ ಪ್ರತೀಕ. ಛಲ ಬಿಡದ ಸಾಧನೆಯ ದ್ಯೋತಕ ಅವನು. ಶಿವ ಧ್ಯಾನಪ್ರಿಯ. ಎಲ್ಲಾ ಜೀವರಾಶಿಗಳನ್ನು ರಕ್ಷಿಸುವ ಶಿವನು ಆಡಂಬರಗಳಿಂದ ಮುಕ್ತನಾದವನು. ಆತ ಆಭರಣಪ್ರಿಯನಲ್ಲ, ಅಲಂಕಾರಪ್ರಿಯನೂ ಅಲ್ಲ, ಭಕ್ತಿಪ್ರಿಯ. ಮೈಗೆ ಭಸ್ಮ ಬಳಿದುಕೊಂಡು ಸ್ಮಶಾನದಲ್ಲಿರುವ ಪರಶಿವ ಸರಳ ಮತ್ತು ಅಮೋಘಶಕ್ತಿಯ ಸಂಕೇತ.

ಶಿವರಾತ್ರಿಯ ದಿನದಂದೇ ಶಿವ ತಾಂಡವನೃತ್ಯ ಮಾಡಿದನೆಂದು ಹೇಳಲಾಗುತ್ತದೆ. ಸಮುದ್ರ ಮಂಥನದ ಸಂದರ್ಭದಲ್ಲಿ ಉಂಟಾದ ಕೋಲಾಹಲವನ್ನು (ವಿಷ) ಪರಶಿವನು ಲೋಕಕಲ್ಯಾಣಕ್ಕಾಗಿ ಕುಡಿದನು. ಇದನ್ನು ಕೇಳಿದ ಪಾರ್ವತಿ ಓಡೋಡಿ ಬಂದು ಶಿವನನ್ನು ತಡೆದಳು. ವಿಷ ಆ ಹೊತ್ತಿಗೆ ಗಂಟಲು ಪ್ರವೇಶಿಸಿತ್ತು. ಪಾರ್ವತಿ ಅದನ್ನು ತಡೆದ ಕಾರಣ ಆ ವಿಷ ಅಲ್ಲಿಯೇ ಸ್ಥಗಿತಗೊಂಡಿತು. ಅದಕ್ಕಾಗಿ ಶಿವನಿಗೆ 'ವಿಷಕಂಠ' ಎಂಬ ಹೆಸರು ಸಹ ಇದೆ.

ಶಿವರಾತ್ರಿಯ ಆಚರಣೆಯಲ್ಲಿ ವೈಜ್ಞಾನಿಕ ಅಂಶಗಳಿವೆ. ಸೂರ್ಯ ಮತ್ತು ಚಂದ್ರನ ಚಲನೆಗೆ ನಮ್ಮ ದೇಹ ಒಗ್ಗಿಕೊಳ್ಳಬೇಕಾಗುತ್ತದೆ. ಶಿವರಾತ್ರಿಯು ಚಳಿಗೆ ಇತಿಶ್ರೀ ಹಾಡಿ ಬೇಸಿಗೆಯನ್ನು ಸ್ವಾಗತಿಸುತ್ತದೆ. ಹವಾಮಾನದ ಈ ವ್ಯತ್ಯಾಸದಿಂದ ಮನುಷ್ಯರಲ್ಲಿ ನೆಗಡಿ, ಕೆಮ್ಮು ಮೊದಲಾದ ಕಾಯಿಲೆ ಬರುವ ಸಂಭವವಿರುತ್ತದೆ. ಬಿಲ್ವಪತ್ರೆಯ ವಾಸನೆ ಮತ್ತು ಅಭಿಷೇಕಗಳು ಮನುಷ್ಯನಿಗೆ ರೋಗನಿರೋಧಕ ಶಕ್ತಿಯನ್ನು ತಂದುಕೊಡುತ್ತವೆ.

ತುಮಕೂರಿನ ಶ್ರೀದೇವಿ ವಿದ್ಯಾಸಂಸ್ಥೆಯ ಆವರಣದಲ್ಲಿರುವ ಶ್ರೀ ಶಂಭುಲಿಂಗೇಶ್ವರ ಸ್ವಾಮಿಯನ್ನು ಶಿವರಾತ್ರಿಯ ದಿನದಂದು ವಿವಿಧ ರೀತಿಯಲ್ಲಿ ಪೂಜೆ ಮಾಡಲಾಯಿತು. ಶಿವರಾತ್ರಿಯ ಬೆಳಗ್ಗೆ ಲವಣನ್ಯಾಸದಿಂದ ಧಾರ್ಮಿಕವಿಧಿ ಪ್ರಾರಂಭವಾಯಿತು. ಕಳಸ ಸ್ಥಾಪನೆಯ ನಂತರ ಅಭಿಷೇಕವಿಧಿ ನಡೆಯಿತು, ಫಲಪಂಚಾಮೃತ ಏಕಾದಶ ರುದ್ರಾಭಿಷೇಕ ನಡೆಯಿತು. ಇಡೀ ದಿನ ಅಂದರೆ ಶಿವರಾತ್ರಿಯ ಬೆಳಗ್ಗೆ ಹಾಗೂ ರಾತ್ರಿ ಎಡೆಬಿಡದೆ ಶ್ರೀ ಶಂಭುಲಿಂಗೇಶ್ವರ ಸ್ವಾಮಿ ಆಲಯದಲ್ಲಿ ನಿರಂತರವಾಗಿ ಧಾರ್ಮಿಕ ವಿಧಿಗಳು ಜರುಗಿದವು.

ಸಂಜೆ ಮತ್ತು ರಾತ್ರಿ ನಾಲ್ಕು ಜಾವದ ಪೂಜೆಯನ್ನು ಶಂಭುಲಿಂಗೇಶ್ವರ ಸ್ವಾಮಿಗೆ ಮಾಡಲಾಯಿತು. ಪ್ರತಿ ಜಾವದ ಪೂಜೆಗೂ ಫಲಪಂಚಾಮೃತ ಏಕಾದಶರುದ್ರಾಭಿಷೇಕ ಕಾರ್ಯಕ್ರಮ ನಡೆಯಿತು.

ಬೆಳಗ್ಗೆ ಭಕ್ತರೇ ಶಿವನಿಗೆ ಸ್ವತಃ ಅಭಿಷೇಕ ಮಾಡುವ ವ್ಯವಸ್ಥೆ ಕಲ್ಪಿಸಲಾಗಿತ್ತು. ರಾಮದುರ್ಗದ ತಂಡದಿಂದ ಭಜನಾ ಕಾರ್ಯಕ್ರಮಗಳು ಜರುಗಿದವು. ಶಿವರಾತ್ರಿಯ ಪೂಜಾ ಕಾರ್ಯಗಳಿಗೆ ವೇದಜ್ಞರಾದ ಎ. ರಘುರಾಮಶಾಸ್ತ್ರಿ ಆಗಮಿಸಿ ಪೂಜಾ ಕಾರ್ಯಗಳನ್ನು ನಡೆಸಿಕೊಟ್ಟರು. ಧಾರ್ಮಿಕ ವಿಧಿಗಳನ್ನು ಮಾಡಿಸುವ ಭೀಮಸೇನಾಚಾರಿ, ರೂಪಕ, ಹರ್ಷ, ಪ್ರಿಯಾನ್ಸ್ ಚೌಬೆ ಮೊದಲಾದ ವ್ಯಕ್ತಿಗಳು ಈ ಪೂಜಾ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು.

■ ನಿರೂಪಣೆ: ಎನ್.ಭಾರತಿ

---



## ವ್ಯಕ್ತಿಯ ಬೆಳವಣಿಗೆಯಲ್ಲಿ ಇಚ್ಛಾಶಕ್ತಿಗೆ ದೊಡ್ಡ ಸ್ಥಾನ

"ಯೌವನದಲ್ಲಿರುವವರಿಗೆ ತಮ್ಮ ಭೌತಿಕ ಶಕ್ತಿಯ ಮೇಲೆ ಹೆಚ್ಚು ವಿಶ್ವಾಸ. ಅವರಲ್ಲಿ ಹೆಚ್ಚಿನವರು ದೈಹಿಕ ಬೆಳವಣಿಗೆಗೆ ಹೆಚ್ಚಿನ ಆದ್ಯತೆ ಕೊಡುತ್ತಾರೆ. ಅವರಿಗೆ ಯಾರ ಮಾತೂ ಕೇಳಿಸುವುದಿಲ್ಲ. ಯೌವನವೇ ಅಂತಹುದು. ಅವರುಗಳಿಗೆ ಅವರ ದೇಹಕ್ಕೆ ಯಾವುದಾದರೂ ತೊಂದರೆಯಾದರೆ ಅದರಿಂದ ಹೊರಬರುವುದು ಹೇಗೆ ಎಂದು ಚಿಂತಿಸುತ್ತಾರೆ. ದೈಹಿಕ ಶಕ್ತಿಗಿಂತ ದೊಡ್ಡದು ಯಾವುದಿದೆ ಎಂದು ಹಲವು ಕಡೆ ವಿಚಾರಿಸುತ್ತಾರೆ. ಸೂಕ್ತ ಮಾರ್ಗದರ್ಶನ ದೊರಕಿದರೆ ದೈಹಿಕ ಶಕ್ತಿಗಿಂತ ದೈವಶಕ್ತಿ ದೊಡ್ಡದು ಎಂಬ ಭಾವನೆ ಬೆಳೆಯುತ್ತದೆ. ಆಗವರು ದೈವಶಕ್ತಿಯ ಮೊರೆ ಹೋಗುತ್ತಾರೆ. ದೈವಶಕ್ತಿಯಿಂದ ವ್ಯಕ್ತಿಯಲ್ಲಿ ಆತ್ಮಶಕ್ತಿ ವೃದ್ಧಿಸುತ್ತದೆ, ಆತ್ಮಶಕ್ತಿಯಿಂದ ಇಚ್ಛಾಶಕ್ತಿ ಬೆಳೆಯುತ್ತದೆ. ಎಷ್ಟೋ ಜನ ದೈಹಿಕವಾಗಿ ದುರ್ಬಲರಾಗಿರುತ್ತಾರೆ. ಆದರೂ ಅವರುಗಳು ತಮ್ಮ ಕ್ಷೇತ್ರದಲ್ಲಿ ಅದ್ಭುತ ಸಾಧನೆ ಮಾಡಿರುತ್ತಾರೆ. ಇದಕ್ಕೆ ಕಾರಣ ಅವರು ಬೆಳೆಸಿಕೊಂಡಿರುವ ಇಚ್ಛಾಶಕ್ತಿ".

"ಡಾ. ಎಂ.ಆರ್. ಹುಲಿನಾಯ್ಕರ್ ಅವರು ಇಚ್ಛಾಶಕ್ತಿಯ ಪ್ರತಿರೂಪ ವಾಗಿದ್ದಾರೆ. ಅವರು ಸಾಧಿಸಿರುವ ಈ ಪ್ರಗತಿ ಇಚ್ಛಾಶಕ್ತಿಗೆ ದೊಡ್ಡ ಉದಾಹರಣೆಯಾಗಿದೆ. ಅವರು ಯಾವುದೇ ರಾಜಕೀಯ ನಾಯಕರ ಬೆಂಬಲದಿಂದ ಈ ಕೆಲಸಗಳನ್ನು ಮಾಡಿದವರಲ್ಲ ಅಥವಾ ಹುಟ್ಟು ಶ್ರೀಮಂತರಾಗಿ ಇಂತಹ ಕೆಲಸ ಮಾಡಿಲ್ಲ. ಅವರು ಬದುಕಿನಲ್ಲಿ ದೈವಶ್ರದ್ಧೆ ಬೆಳೆಸಿಕೊಂಡಿದ್ದಾರೆ. ಅದರಿಂದ ಅವರಲ್ಲಿ ಆತ್ಮಶಕ್ತಿ ಮತ್ತು ಇಚ್ಛಾಶಕ್ತಿಗಳು ವೃದ್ಧಿಯಾಗಿದ್ದು ಅದರಿಂದ ಇಂತಹ ಸಾಧನೆ ಮಾಡಲು ಸಾಧ್ಯವಾಗಿದೆ. ಅವರ ಸಾಧನೆ ಇಂದಿನ ಯುವಪೀಳಿಗೆಗೆ ಆದರ್ಶವಾಗಬೇಕು" ಎಂದು ಗುಲ್ಬರ್ಗ ವಿಭಾಗದ ತಿಂತಿಣಿ ಕನಕ ಗುರುಪೀಠದ ಪೀಠಾಧಿಪತಿಗಳಾಗಿರುವ ಪೂಜ್ಯ ಶ್ರೀ ಸಿದ್ಧರಾಮಾನಂದಪುರಿ ಮಹಾಸ್ವಾಮಿಗಳು ಫೆಬ್ರವರಿ 25ರಂದು ತುಮಕೂರಿನ ಶ್ರೀದೇವಿ ವಿದ್ಯಾಸಂಸ್ಥೆಯ ಆಶ್ರಯದಲ್ಲಿರುವ ಶ್ರೀ ದುರ್ಗಾಂಬಿಕಾದೇವಿಯ ನಾಲ್ಕನೆಯ ವಾರ್ಷಿಕೋತ್ಸವ ಸಂದರ್ಭದಲ್ಲಿ ನಡೆದ ಶ್ರೀ ದುರ್ಗಾಹೋಮದ ನಂತರ ಆಶೀರ್ವಚನ ನೀಡುತ್ತಾ ಹೇಳಿದ ಮಾತುಗಳು.

ಇದೇ ಸಂದರ್ಭದಲ್ಲಿ ಶ್ರೀ ರೇವಣಸಿದ್ಧೇಶ್ವರ ಮಠದ ಪೂಜ್ಯಶ್ರೀ ಬಿಂದುಶೇಖರ್ ಒಡೆಯರ್ ಅವರು ಮಾತನಾಡುತ್ತಾ "ವಿದ್ಯಾರ್ಥಿಗಳು ಕಲಿಕೆಯ ಅವಧಿಯಲ್ಲಿ ಪಠ್ಯ ವಿಷಯಗಳ ಜೊತೆ ವ್ಯಕ್ತಿತ್ವ ವಿಕಸನಕ್ಕೆ ಕಾರಣವಾಗುವ ವಿಚಾರಗಳತ್ತ ಗಮನ ಕೇಂದ್ರೀಕರಿಸಬೇಕು. ಧೈರ್ಯ, ಕರ್ತೃತ್ವ ಶಕ್ತಿ, ಏಕಾಗ್ರತೆ ಮತ್ತು ನಿರಂತರ ದುಡಿಮೆಯ ಮನೋಭಾವವನ್ನು ವಿದ್ಯಾರ್ಥಿ ದಿಸೆಯಲ್ಲೇ ಬೆಳೆಸಿಕೊಳ್ಳಬೇಕು. ಅದರಿಂದ ಸುದೀರ್ಘ ಬದುಕನ್ನು ಯಾವುದೇ ಗೊಂದಲವಿಲ್ಲದೆ ಮತ್ತು ಹೆಚ್ಚು ಶ್ರಮಪಡದೇ ಇತರರಿಗೆ ಹೊರೆಯಾಗದಂತೆ ಬದುಕಬಹುದು' ಎಂದರು.

---

## ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಶ್ರೀವಾಗ್ದೇವಿ ಪ್ರತಿಮೆಯ ಲೋಕಾರ್ಪಣೆ

◀◀ ...ಮೂರನೇ ಪುಟದಿಂದ

ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಪ್ರತಿಷ್ಠಾಪನೆ ಮಾಡಿರುವ, ಕುಳಿತಿರುವ ಭಂಗಿಯಲ್ಲಿನ ಶ್ರೀದೇವಿ ಅರ್ಥಾತ್ ಶ್ರೀ ವಾಗ್ದೇವಿ ಮೂರ್ತಿಯು ಹೊಯ್ಸಳ ವಾಸ್ತುಶಿಲ್ಪದ ಶೈಲಿಯಲ್ಲಿದೆ. ಅದಕ್ಕೆ ಹೊಂದಿಕೊಂಡಿರುವ ಮಂಟಪ ಸಹ ಹೊಯ್ಸಳ ವಾಸ್ತುಶಿಲ್ಪ ಶೈಲಿಯನ್ನು ಹೋಲುತ್ತದೆ. ಅದಕ್ಕೆ ಹೊಂದಿಕೊಂಡಿರುವ, ನಾದ ಹೊಮ್ಮುವ, ವೃತ್ತಾಕಾರದ ನಾಲ್ಕು ಅಲಂಕೃತ ಕಂಬಗಳು, ಸುತ್ತಲ ತೋರಣ, ಚತುರ್ರಸ ಗೋಪುರ, ಶಿಖರ, ಆಮಲಕ ಮತ್ತು ಕಲಶವನ್ನು ಈ ಮಂಟಪ ಹೊಂದಿದೆ. ಇದೊಂದು ಅಪರೂಪದ ಕಲಾಕೃತಿಯಾಗಿದೆ.

ಖ್ಯಾತಶಿಲ್ಪಿ ಸುರಾಲ ವೆಂಕಟರಮಣಭಟ್ಟರು ಮತ್ತು ಶ್ರೀಮತಿ ರತ್ನ ವೆಂಕಟರಮಣಭಟ್ಟರು ನಿರ್ಮಿಸಿರುವ ಈ ಕಲಾಕುಸುಮವು ಸಾವಿರ ವರ್ಷಗಳ ಹಿಂದಿನ ಹೊಯ್ಸಳದ ವಾಸ್ತುಶಿಲ್ಪವನ್ನು ನೆನೆಯುವಂತೆ ಮಾಡುತ್ತದೆ.

ಶ್ರೀದೇವಿ ವೈದ್ಯಕೀಯ ಸಂಸ್ಥೆಯ ನಿರ್ದೇಶಕ ಡಾ. ರಮಣ್ ಆರ್. ಹುಲಿನಾಯ್ಕರ್ ಅವರು, "ಎಲ್ಲಾ ಕ್ಲಿಷ್ಟಕರ ಪ್ರಶ್ನೆಗಳಿಗೂ ಸುಲಲಿತವಾದ ಉತ್ತರ ಕೊಡುವ, ಬ್ರಹ್ಮನೇ ಮೊದಲಾದ ತ್ರಿಮೂರ್ತಿಗಳು ಸೇರಿದಂತೆ ಎಲ್ಲಾ ದೇವತೆಗಳಿಂದಲೂ ಪೂಜಿಸಲ್ಪಡುವ ಹಾಗೂ ಭಾರತದ ತುತ್ತತುದಿಯಲ್ಲಿರುವ ಕಾಶ್ಮೀರ ಪುರವಾಸಿನಿ ಆಗಿರುವ ಶ್ರೀ ವಾಗ್ದೇವಿ ನಮ್ಮ ಇಷ್ಟಾರ್ಥಗಳನ್ನು ತ್ವರಿತವಾಗಿ ಪೂರೈಸುವ ಶಕ್ತಿ ಪಡೆದಿದ್ದಾಳೆ. ಆಕೆಯ ಆಶೀರ್ವಾದ ಎಲ್ಲರಿಗೂ ದೊರೆಯಲಿ" ಎಂದರು. ಶ್ರೀ ದುರ್ಗಾಂಬಿಕಾ ಟ್ರಸ್ಟ್‌ನ ದೇವಿಯ ಮ್ಯಾನೇಜಿಂಗ್ ಟ್ರಸ್ಟಿ ಶ್ರೀಮತಿ ಶಾಂತಾ ದುರ್ಗಾದೇವಿ ಹುಲಿನಾಯ್ಕರ್ ಅವರು ಧಾಮಿಕವಿಧಿಗಳಲ್ಲಿ ಭಾಗವಹಿಸಿದ್ದರು. ಈ ಕಾರ್ಯಕ್ರಮ ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ 2023 ಫೆಬ್ರವರಿ 10ರಂದು ಜರುಗಿತು.

■ ವರದಿ: ಎನ್. ಆನಂದ

# ಶ್ರೀ ದುರ್ಗಾಂಬಿಕಾ ದೇವಿಯ ಪ್ರತಿಷ್ಠಾಪನಾ ಮಹೋತ್ಸವದ ವಾರ್ಷಿಕೋತ್ಸವ

**ಅರ್ಚನೆ**



**ಚಂದ್ರಶೇಖರ್ ಪನೇರು**
**ಅರ್ಚಕರು, ಶ್ರೀ ದುರ್ಗಾಂಬಿಕಾ ದೇವಸ್ಥಾನ**

**ಪುರಾಣದ ಪ್ರಕಾರ, ದುರ್ಗೆಯು ಪಾರ್ವತಿಯ ಚರ್ಮವಾಗಿದ್ದಾಳೆ. ರಾಕ್ಷಸ ಸಹೋದರರಾದ ಶುಂಭ ಮತ್ತು ನಿಶುಂಭರ ವಿರುದ್ಧ ಹೋರಾಡುವ ಉದ್ದೇಶಕ್ಕೇ ಅವಳ ಅವತಾರವಾಗಿರುವುದು. ದುಷ್ಟಶಕ್ತಿಯ ವಿರುದ್ಧ ಹೋರಾಡಲು ಶ್ರೀ ದುರ್ಗಾಂಬಿಕಾ ದೇವಿ ಅನೇಕ ಸಹಾಯಕರನ್ನು ಸೃಷ್ಟಿಸಿದಳು. ಶ್ರೀ ಕಾಳಿದೇವಿ ಅವರಲ್ಲಿ ಅತ್ಯಂತ ಪ್ರಸಿದ್ಧಳು.**

## ದೇವಿಯ ಮಹತ್ವ

ಹಿಂದೂ ದೇವತೆಗಳಲ್ಲಿ ಶ್ರೀ ದುರ್ಗಾಂಬಿಕಾ ದೇವಿ ಅತ್ಯಂತ ಪ್ರಮುಖವಾದವಳು. ಅವಳು ಶಕ್ತಿಯ ಸಂಕೇತವಾಗಿದ್ದಾಳೆ. ಆಕೆ ಅನೇಕ ಹೆಸರು, ವ್ಯಕ್ತಿ ಮತ್ತು ಅಂಶಗಳಿಂದ ಕರೆಯಲ್ಪಡುತ್ತಾಳೆ. ಮಹಿಷಾಸುರಮರ್ದಿನಿ ಅಥವಾ ಶಕ್ತಿಯ ರೂಪದಲ್ಲಿ ಅವಳು ದುಷ್ಟರನ್ನು ನಾಶ ಮಾಡುವವಳು ಎಂದೇ ಭಕ್ತರು ಆಕೆಯನ್ನು ನಂಬಿದ್ದಾರೆ. ಅವಳು ತನ್ನ ಹತ್ತು ತೋಳುಗಳಲ್ಲಿ ದೇವತೆಗಳು ನೀಡಿರುವ ವಿವಿಧ ಮಾರಕ ಆಯುಧಗಳನ್ನು ಹಿಡಿದಿದ್ದಾಳೆ.

ಪುರಾಣದ ಪ್ರಕಾರ, ದುರ್ಗೆಯು ಪಾರ್ವತಿಯ ಚರ್ಮವಾಗಿದ್ದಾಳೆ. ರಾಕ್ಷಸ ಸಹೋದರರಾದ ಶುಂಭ ಮತ್ತು ನಿಶುಂಭರ ವಿರುದ್ಧ ಹೋರಾಡುವ ಉದ್ದೇಶಕ್ಕೇ ಅವಳ ಅವತಾರವಾಗಿರುವುದು. ದುಷ್ಟಶಕ್ತಿಯ ವಿರುದ್ಧ ಹೋರಾಡಲು ಶ್ರೀ ದುರ್ಗಾಂಬಿಕಾ ದೇವಿ ಅನೇಕ ಸಹಾಯಕರನ್ನು ಸೃಷ್ಟಿಸಿದಳು. ಶ್ರೀ ಕಾಳಿದೇವಿ ಅವರಲ್ಲಿ ಅತ್ಯಂತ ಪ್ರಸಿದ್ಧಳು. ನಂತರ ದುರ್ಗಾಂಬಿಕೆ ಸಪ್ತಮಾತೃಕೆಗಳನ್ನು ಸೃಷ್ಟಿಸಿದಳು. ಅಂದರೆ, ಏಳು ತಾಯಂದಿರನ್ನು ಸೃಷ್ಟಿಸಿದಳು ಎಂದು ಹೇಳಲಾಗುತ್ತದೆ. ಇವರು ಮೂಲತಃ ಯಕ್ಷ ದೇವರುಗಳೆಂದು ಹೇಳಲಾಗುತ್ತದೆ.

ಶ್ರೀ ದುರ್ಗಾದೇವಿಯು ಮೋಕ್ಷ ಮತ್ತು ತ್ಯಾಗದ ಸಾರವಾಗಿದ್ದಾಳೆ. ಅವಳು ಶ್ರೀ ಲಕ್ಷ್ಮಿ ಮತ್ತು ಶ್ರೀ ಸರಸ್ವತಿಯ ಪ್ರತಿರೂಪ. ಆಕೆ ಸಂಪತ್ತು ಮತ್ತು ಜ್ಞಾನದ ದೇವತೆಯಾಗಿದ್ದಾಳೆ. ಆದ್ದರಿಂದ ಅವಳು ಸಂಪತ್ತು, ಸೌಂದರ್ಯ ಮತ್ತು ಜ್ಞಾನದ ತಾಯಿಯಾಗಿದ್ದಾಳೆ. ಶ್ರೀ ದುರ್ಗಾದೇವಿಯು ಪರಮಾತ್ಮನ ಶಕ್ತಿಯಾಗಿದ್ದು, ವಿಶ್ವದಲ್ಲಿ ಧರ್ಮವನ್ನು ಕಾಪಾಡುವ ಜವಾಬ್ದಾರಿಯನ್ನು ಹೊಂದಿದ್ದಾಳೆ. ಅವಳು ಭಗವಂತನ ಶಕ್ತಿಯ ಅಂಶ. ಅವಳಿಲ್ಲದೆ ಶಿವನಿಗೆ ಯಾವುದೇ ಅಭಿವ್ಯಕ್ತಿ ಇಲ್ಲ ಹಾಗೆಯೇ ಶಿವ ಇಲ್ಲದೆ ದುರ್ಗೆಯು ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಶಿವನು ಕೇವಲ ಮೂಕಸಾಕ್ಷಿಯಾಗಿದ್ದಾನೆ. ಎಲ್ಲ ಕ್ರಿಯೆಗಳನ್ನು ಮಾಡುವವಳು ಶ್ರೀ ದುರ್ಗಾಂಬಿಕಾ ದೇವಿ ಎಂದು ದೇವಿ ಭಾಗವತದಲ್ಲಿ ಹೇಳಲಾಗಿದೆ.



## ಈಗಲೂ ದೇವಿ ಸದಾ ನಮ್ಮ ಜೊತೆಯಲ್ಲಿದ್ದಾಳೆ

ಶ್ರೀ ದುರ್ಗಾಂಬಿಕಾ ದೇವಿ ತನ್ನ ಹತ್ತಿರ ಬರುವ ಎಲ್ಲರ ಕಷ್ಟಗಳನ್ನು ಪರಿಹರಿಸುತ್ತಾಳೆ. ಅನೇಕ ಭಕ್ತರಿಗೆ ವಿವಿಧ ರೀತಿಯಲ್ಲಿ ಬಂದ ಕಷ್ಟಗಳನ್ನು ಆಕೆ ಪರಿಹಾರ ಮಾಡಿದ್ದಾಳೆ. ಬೇಕಾದಷ್ಟು ಘಟನೆಗಳು ನಡೆದಿವೆ. ಒಂದು ಪ್ರಕರಣವನ್ನು ಮಾತ್ರ ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಆತ ರಾಜಸ್ಥಾನ ಮೂಲದ ವ್ಯಾಪಾರಿ. ತುಮಕೂರಿನಲ್ಲಿ ಪಾರ್ಟ್‌ನರ್‌ಶಿಪ್‌ನಲ್ಲಿ ಮಾರ್ಬಲ್ ವ್ಯಾಪಾರ ನಡೆಸುತ್ತಿದ್ದರು. ಅವರಿಗೂ ಮತ್ತು ಸ್ನೇಹಿತನಿಗೂ ಮನಸ್ತಾಪವಾಯಿತು. ವ್ಯಾಪಾರದಲ್ಲಿ ತುಂಬಾ ನಷ್ಟವಾಯಿತು. ಒಮ್ಮೆ ಆತ ದೇವಸ್ಥಾನಕ್ಕೆ ಬಂದು ದೇವಿಯ ಮುಂದೆ ಎಷ್ಟೋ ಹೊತ್ತು ನಿಂತು ಪ್ರಾರ್ಥನೆ ಮಾಡುತ್ತಿದ್ದರು. ನಾನು ಅವರಿಗೆ ಒಂದು ದಿನ 'ನಿಮ್ಮ ಕಷ್ಟವೇನು?' ಎಂದು ಪ್ರಶ್ನೆ ಮಾಡಿದೆ. ಆತನ ತನ್ನ ಪರಿಸ್ಥಿತಿಯನ್ನೆಲ್ಲಾ ವಿವರಿಸಿ 'ಅಂಗಡಿಯ ಕರೆಂಟ್ ಬಿಲ್ ಪಾವತಿ ಮಾಡಲು ಸಹ ಕಷ್ಟವಾಗಿದೆ, ಜೀವನವೇ ಬೇಡ ಎನಿಸಿದೆ' ಎಂದರು. 'ಅಷ್ಟೊಂದು ನಿರಾಸೆಯಾಗುವುದು ಬೇಡ' ಎಂದು ಸಮಾಧಾನ ಮಾಡಿದೆ. ನಂತರ ಅವರು 'ಯಾವುದಾದರೂ ಹೋಮ ಮಾಡಿಸಿದರೆ ಈ ಕಷ್ಟ ಪರಿಹಾರವಾಗುವುದಾದರೆ ಹೇಳಿ, ಅದನ್ನು ಮಾಡಿಸುತ್ತೇನೆ' ಎಂದರು. ಅದಕ್ಕೆ ನಾನು 'ಈಗಲೇ ನೀವು ಆರ್ಥಿಕ ತೊಂದರೆಯಲ್ಲಿದ್ದೀರಿ. ಮತ್ತೆ ಅಂತಹ ಕಷ್ಟ ಕೊಡುವುದು ಬೇಡ. ದೇವಿಗೆ ಭಕ್ತಿ ಮತ್ತು ಶ್ರದ್ಧೆ ಮುಖ್ಯ. ಅದನ್ನು ಮಾಡಿ, ನಿಮಗೆ ಒಳ್ಳೆಯದು ಆಗುತ್ತದೆ' ಎಂದೆ. 'ಶಾಸ್ತ್ರಿಗಳೇ ನೀವೇ ಹೇಳಿ' ಎಂದರು. ಆಗ ನಾನು 48 ದಿನ ತಪ್ಪದೇ ದೇವಿ ಪಾರಾಯಣ ಮಾಡಿ ಎಂದು ಹೇಳಿ, ದೇವಿ ಪಾರಾಯಣದ ಶ್ಲೋಕಗಳನ್ನು ಅವರಿಗೆ ಕೊಟ್ಟೆ. ಜೊತೆಗೆ ಅದನ್ನು ಮಾಡುವ ವಿಧಾನವನ್ನು ಹೇಳಿಕೊಟ್ಟೆ. ಅವರ ಬದುಕಿನಲ್ಲಿ ಅದ್ಭುತ ಪವಾಡ ನಡೆಯಿತು. ಅವರೇ ಸ್ವತಂತ್ರವಾಗಿ ಮಾರ್ಬಲ್ ವ್ಯಾಪಾರ ಪ್ರಾರಂಭ ಮಾಡಿದರು. ಬಹುಬೇಗ ವ್ಯಾಪಾರ ಕುದುರಿತು. ಈಗ ಅವರು ಪ್ರತಿದಿನ ದೇವಸ್ಥಾನಕ್ಕೆ ಬಂದು ದೇವಿಯ ಆಶೀರ್ವಾದ ಪಡೆದು ಹೋಗುತ್ತಾರೆ.



## ಅರ್ಥಪೂರ್ಣವಾಗಿ ದೇವಿಯ ವಾರ್ಷಿಕೋತ್ಸವದ ಆಚರಣೆ

ಶ್ರೀ ದುರ್ಗಾಂಬಿಕಾ ದೇವಿಯ ಆಶೀರ್ವಾದ ಎಲ್ಲರಿಗೂ ದೊರೆಯಬೇಕು ಎಂದು ಡಾ. ಎಂ.ಆರ್.ಹುಲಿನಾಯ್ಕರ್ ದಂಪತಿ 28 ಫೆಬ್ರುವರಿ 2020ರಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ದೇವಿಯ ಪ್ರತಿಷ್ಠಾಪನೆಯನ್ನು ಮಾಡಿದರು. ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ದೇವಿ ಪೂಜಾ ಕಾರ್ಯಗಳು ನಡೆಯುತ್ತಿವೆ. ಭಕ್ತರು ಯಥೇಚ್ಛ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ.

ಫೆಬ್ರುವರಿ 25 ತಿಥಿಯ ಪ್ರಕಾರ ಶ್ರೀ ದುರ್ಗಾಂಬಿಕಾ ದೇವಿಯು ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಪ್ರತಿಷ್ಠಾಪನೆಯಾದ ದಿನ. ನಿಟ್ಟೆಯ ವೇದಜ್ಞರಾಗಿರುವ ಶ್ರೀ ಪ್ರಸನ್ನಾಚಾರ್ ಅವರು ಅಂದು ಶ್ರೀ ದುರ್ಗಾಂಬಿಕಾ ದೇವಿಯನ್ನು ಇಲ್ಲಿ ಪ್ರತಿಷ್ಠಾಪನೆ ಮಾಡಿದರು. ಶ್ರೀ ದುರ್ಗಾಂಬಿಕೆಯ ಇಂತಹ ಸುಂದರ ಶಿಲಾಮೂರ್ತಿಯನ್ನು ಸುರಾಲ ವೆಂಕಟರಮಣಭಟ್ಟರು ನಿರ್ಮಿಸಿಕೊಟ್ಟಿದ್ದಾರೆ. ಇದು ನಾಲ್ಕನೆಯ ವಾರ್ಷಿಕೋತ್ಸವ.

ಅಂದು ಬೆಳಗಿನಿಂದಲೇ ಧಾರ್ಮಿಕ ವಿಧಿಗಳು ಪ್ರಾರಂಭವಾದವು. ಕಾಳೇನಹಳ್ಳಿಯ ಖ್ಯಾತ ವೇದಜ್ಞರಾದ ಶ್ರೀ ರವಿಶರ್ಮ ಅವರು ಪ್ರಾರಂಭದಲ್ಲಿ ಶ್ರೀ ವಿನಾಯಕನ ಪೂಜೆ ನಡೆಸಿ, ಇಡೀ ಕಾರ್ಯಕ್ರಮ ಯಶಸ್ವಿಯಾಗಿ ಜರುಗುವಂತೆ ವರ ನೀಡು ಎಂದು ಬೇಡಿದರು.

ಮುಖ್ಯ ಋತ್ವಿಕರಾದ ತುಮಕೂರು ತಾಲ್ಲೂಕು ಗೂಳೂರು ಹೋಬಳಿ ಕಾಳೇನಹಳ್ಳಿಯ ಶ್ರೀ ರವಿಶರ್ಮ ಅವರು ಡಾ. ಹುಲಿನಾಯ್ಕರ್ ದಂಪತಿಯಿಂದ ಶ್ರೀ ದುರ್ಗಾಹೋಮಕ್ಕೆ ಸಂಕಲ್ಪ ಮಾಡಿಸಿದರು. ಹುಲಿನಾಯ್ಕರ್ ದಂಪತಿ ಹಲವು ವರ್ಷ ತಪಸ್ಸು ಮಾಡಿ ದೇವಿಯನ್ನು ಇಲ್ಲಿಗೆ ಕರೆತಂದಿದ್ದಾರೆ. ಉಗ್ರಸ್ವರೂಪಿಯಾಗಿದ್ದ ಆಕೆಯನ್ನು ತಮ್ಮ ಭಕ್ತಿ ಮತ್ತು ಸತತ ಪ್ರಾರ್ಥನೆಯ ಮೂಲಕ ಮಾತೃಸ್ವರೂಪಿಣಿಯನ್ನಾಗಿಸಿದ್ದಾರೆ. ಈ ದಂಪತಿಗೆ ಶ್ರೀ ದುರ್ಗಾಂಬಿಕೆಯ ಮೇಲೆ ಅನನ್ಯವಾದ ಭಕ್ತಿ. ಡಾ. ಹುಲಿನಾಯ್ಕರ್ ಅವರು ಪ್ರತಿದಿನ ದೇವಸ್ಥಾನಕ್ಕೆ ಬಂದು ದೇವಿಯ ಆಶೀರ್ವಾದ ಪಡೆದೇ ಮುಂದಿನ ಕೆಲಸಗಳಿಗೆ ಹೋಗುವುದು. ಅದೇ ರೀತಿ ಶ್ರೀಮತಿ ಶಾಂತಾ ದುರ್ಗಾದೇವಿ ಹುಲಿನಾಯ್ಕರ್ ಅಮ್ಮ ಸಹ ಮಂಗಳವಾರ ಮತ್ತು ಶುಕ್ರವಾರದ ಪೂಜೆಯನ್ನು ತಪ್ಪಿಸುವುದಿಲ್ಲ. ಡಾ. ಲಾವಣ್ಯ ರಮಣ ಅವರು ದೇವಸ್ಥಾನದ ಎಲ್ಲಾ ಕೆಲಸಗಳನ್ನು ಕಾಲಕಾಲಕ್ಕೆ ಅಚ್ಚುಕಟ್ಟಾಗಿ ಮಾಡುತ್ತಿದ್ದಾರೆ. ಇನ್ನು ಶ್ರೀಮತಿ ಅಂಬಿಕಾ ಪಾಟೀಲ್, ಶ್ರೀ ಪಾಟೀಲ್, ಡಾ ಮನೋನ್ಮಣಿ, ಡಾ. ರಮಣ ಹುಲಿನಾಯ್ಕರ್ ಹೀಗೆ ಎಲ್ಲರೂ ದೇವಿಯ ಸನ್ನಿಧಿಯನ್ನು ಬಯಸಿ ಬರುತ್ತಾರೆ. ಅವರಿಗೆ ಶ್ರೀ ದುರ್ಗಾಂಬಿಕಾ ದೇವಿಯೇ ಎಲ್ಲವೂ ಆಗಿದ್ದಾಳೆ. ಇದರಿಂದ ಶ್ರೀ ದುರ್ಗಾಂಬಿಕೆಯ ವಾರ್ಷಿಕೋತ್ಸವ ಮನೆಯ ಸಮಾರಂಭ ಎಂಬ ಉತ್ಸಾಹ ಎಲ್ಲರಲ್ಲೂ ಕಾಣಿಸಿತು. ಅವರು ಆತ್ಮೀಯವಾಗಿ ಕರೆದ ಭಕ್ತರ ಸಂಖ್ಯೆ ಸಹ ಗಣನೀಯವಾಗಿ ಹೆಚ್ಚಿತ್ತು.

ಶ್ರೀ ದುರ್ಗಾಹೋಮವು ಶ್ರೀ ದುರ್ಗಾಂಬಿಕಾ ದೇವಿಯ ಸನ್ನಿಧಾನದಲ್ಲಿ ಜರುಗಿತು. ಪೂರ್ಣಾಹುತಿ ಕಾರ್ಯಕ್ರಮದಲ್ಲಿ ಕಾಗಿನೆಲೆ ಗುರುಪೀಠದ ಗುಲ್ಬರ್ಗಾ ವಿಭಾಗದ ತಿಂತಿಣಿ ಗುರುಪೀಠದ ಮುಖ್ಯಸ್ಥರಾಗಿರುವ ಪೂಜ್ಯ ಶ್ರೀ ಸಿದ್ಧರಾಮಾನಂದಪುರಿ ಮಹಾಸ್ವಾಮಿ ಮತ್ತು ರೇವಣಸಿದ್ಧೇಶ್ವರ ಮಠದ ಬಿಂದುಶೇಖರ್ ಒಡೆಯರ್ ಅವರು ಭಾಗವಹಿಸಿದ್ದರು.

ಶ್ರೀ ಶಂಭುಲಿಂಗೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ 'ಕಳಾಹೋಮ' ಮಾಡಲಾಯಿತು. ಪ್ರಾಚೀನ ದೇವಾಲಯಗಳಲ್ಲಿ ಈ ಕಳಾಹೋಮ ಮಾಡುವ ಪದ್ಧತಿ ಜಾರಿಯಲ್ಲಿದೆ. ಅನೇಕ ದೋಷಗಳಿಂದ ದೇವತಾಮೂರ್ತಿಯಲ್ಲಿ ಪ್ರತಿಷ್ಠಾಪನೆಯ ನಂತರ ಕಾಲಕ್ರಮೇಣ ಆ ಶಕ್ತಿ ಕುಂದುತ್ತಾ ಹೋಗುತ್ತದೆ. ಮತ್ತೆ ಶಕ್ತಿಯ ಸಂಚಯನಕ್ಕಾಗಿ ಕಳಾಹೋಮವನ್ನು ಮಾಡಲಾಗುತ್ತದೆ. ಶ್ರೀ ಶಂಭುಲಿಂಗೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಈ ಹೋಮವನ್ನು ಮಾಡಲಾಯಿತು.

ಶ್ರೀ ದುರ್ಗಾಂಬಿಕಾ ದೇವಿಯ ಸನ್ನಿಧಿಯಲ್ಲಿ ಶ್ರೀ ನಾಗದೇವರು ಇದ್ದಾರೆ. ಅದಕ್ಕಾಗಿ 'ನವಕ ಪ್ರಧಾನ ಹೋಮ'ವನ್ನು ಮಾಡಲಾಯಿತು. ಒಂಬತ್ತು ಕಲಶಗಳಲ್ಲಿ ಪವಿತ್ರ ಜಲವನ್ನು ಸಂಗ್ರಹಿಸಿಕೊಂಡು ಅದರಿಂದ ಶ್ರೀ ನಾಗದೇವರಿಗೆ ಅಭಿಷೇಕ ಮಾಡಲಾಯಿತು. ನಂತರ ಹೋಮಾದಿ ಕಾರ್ಯಗಳು ನಡೆದವು. ಆಶ್ಲೇಷಬಲಿ ಕಾರ್ಯಕ್ರಮ ಸಹ ಮಾಡಿದೆವು. ಕೊನೆಯಲ್ಲಿ, ನೆರೆದ ಭಕ್ತರಿಗೆ ಪ್ರಸಾದವನ್ನು ವಿತರಣೆ ಮಾಡಲಾಯಿತು. ಶ್ರೀ ದುರ್ಗಾಂಬಿಕಾ ದೇವಿಯ ದರ್ಶನ ಮತ್ತು ಆಶೀರ್ವಾದ ಪಡೆದ ನೂರಾರು ಭಕ್ತರು ಹರ್ಷ ವ್ಯಕ್ತಪಡಿಸಿದರು.



Printed and Published by **Shridevi Media Center,** Lingapura, NH 4, Sira Road, Tumakuru - 572106,, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Ambika M Hulinaykar**